ಪನ್ಯಾಸ
ಥಮಾಲೆ

೨೯೮

ಬಾಲಲೀಲಾ ಮಹಾಂತ ಶಿವಯೋಗಿ

ಎಸ್. ಎಸ್. ಭೂಸರಡ್ಡಿ
M. A., B.Ed.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಡಿಶೆಂಬರ ೧೯೭೮

ಉಪನ್ಯಾಸ ಗ್ರಂಥಮಾಲೆ
೨೯೮

ಬಾಲಲೀಲಾ ಮಹಾಂತ ಶಿವಯೋಗಿ

ಶ್ರೀ ಎಸ್. ಎಸ್. ಭೂಸರಡ್ಡಿ

M. A., B.Ed

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಿಶೆಂಬರ, ೧೯೭೮

ಪ್ರಕಾಶಕರು :
ಸಿ. ಎಸ್. ಕಣವಿ
ನಿರ್ದೇಶಕರು,
ವ್ಯಾಸಂಗವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ. ೫೦೦೦ ಪ್ರತಿಗಳು
ಡಿಶೆಂಬರ ೧೯೭೮

ಬೆಲೆ: ೨೫ ಪೈಸೆ

ಮುದ್ರಕರು :
ಜಿ. ಬಿ. ಮನ್ವಾಚಾರ,
ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ-೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆ ಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರು ವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರ ಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧ ಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತ ವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿ ಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋ ಷದ ಸಂಗತಿಯಾಗಿದೆ.

ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ, ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೯೭ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಎಸ್. ಒಡೆಯರ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗದ ವಿಸ್ತರಣ ಹಾಗೂ ಪ್ರಕಟನ ಶಾಖೆಯುವರು ಶೇಡಬಾಳದ ಸನ್ಮತಿ ವಿದ್ಯಾಲಯದ ಆಶ್ರಯದಲ್ಲಿ ೧೯೭೫ ಅಕ್ಟೋಬರ ೨೯, ೩೦ರಂದು ಏರ್ಪಡಿಸಿದ ೨೧೧ನೆಯ ಉಪನ್ಯಾಸ ಮಾಲೆಯಲ್ಲಿ ಈ ನಾಡಿನ ಶಿವಯೋಗಿ ಪುಂಗವರಾಗಿ ಬೆಳಗಿ ಇಂದಿಗೂ ಜನಮನದಲ್ಲಿ ಹಚ್ಚ ಹಸುರಾಗಿ ನಳನಳಿಸುತ್ತಿರುವ'ಬಾಲಲೀಲಾ ಮಹಾಂತ ಶಿವಯೋಗಿ' ಗಳ ಬಗೆಗೆ ಮಾತನಾಡಿದೆ. ಅಂದಿನ ಭಾಷಣದ ವಿಸ್ತೃತ ರೂಪದ ಫಲವೇ ಈ ಕೃತಿ.

ಬಾಲಲೀಲಾ ಮಹಾಂತ ಶಿವಯೋಗಿಗಳು ಲೀಲಾ ಪುರುಷರು; ಅವರು ಜಂಗಮಲಿಂಗವಾಗಿ ಮೆರೆದ ಲೀಲಾ ವಿನೋದಗಳು ಅಪಾರವಾಗಿವೆ. ಅದಕ್ಕಿಂತಲೂ ಮಿಗಿಲು ಕನ್ನಡ ಸಾಹಿತ್ಯಕ್ಕೆ ಅವರು ನೀಡಿದ 'ಕೈವಲ್ಯದರ್ಪಣ' ಒಂದು ಚಿರಂತನ ಕಾಣಿಕೆ. ಮಾನವನ ಬದುಕು ಬಂಗಾರವಾಗಬೇಕೆಂಬ ಹೆಬ್ಬಯಕೆಯಿಂದ ಶ್ರೀಗಳು ತಮ್ಮ ಅಪಾರ ಅನುಭವದ ಅಮೃತವನ್ನೇ ಈ ತತ್ತ್ವಪದಗಳ ಮುಖಾಂತರ ಕನ್ನಡಿಗರಿಗೆ ಉಣಬಡಿಸಿದ್ದಾರೆ. ವಿಶ್ವಸಂಸ್ಕೃತಿಯ ಅಮರ ಸಂದೇಶವನ್ನು ಬೀರಿದ್ದಾರೆ. ಮಾನವನು ಮಹಾಮಾನವನಾಗಿ ದೇವಮಾನವನಾಗುವದರಲ್ಲಿಯೇ ಜೀವಿತದ ಸಫಲತೆಯಿದೆ. ದೇವನೊಲಿಸ ಬಂದ ಪ್ರಸಾದ ಕಾಯ ಅಮೂಲ್ಯವಾದುದು. ಈ

ಕಾಯುವನ್ನು ಸರಿಯಾಗಿ ಉಪಯೋಗಿಸುವ ಬಗೆಯುನ್ನು ವಿವರಿಸುವ ಪರಿ ಮನೋಜ್ಞವಾಗಿದೆ; ಮಾರ್ಮಿಕವಾಗಿದೆ. ಹತ್ತೊಂಭತ್ತನೆಯ ಶತಮಾನದ ಆದಿಭಾಗ ಕನ್ನಡ ಸಾಹಿತ್ಯಲೋಕದ ಕತ್ತಲೆಯ ಯುಗವೆಂದು ಹೇಳಲಾಗುತ್ತದೆ. ಈ ಸಂದರ್ಭದಲ್ಲಿ ಸಾಹಿತ್ಯರಂಗದಲ್ಲಿ ತಮ್ಮ ಬೆಳಕಿನ ಹೆಜ್ಜೆಯನ್ನು ಮೂಡಿಸಿದವರು ಬಾಲಲೀಲಾ ಮಹಾಂತ ಶಿವಯೋಗಿಗಳು. ದಿನಗಳೆದಂತೆ ಕಾಲಗರ್ಭದಲ್ಲಿ ಮರೆಯಾಗುತ್ತಿರುವ ಈ ನಾಡಿನ ಶಿವಯೋಗಿಗಳ ಪಾವನ ಜೀವನ ಸಂದೇಶ ನಾಡಿನ ಮನೆಮನೆಗೂ ಮನಮನಕ್ಕೂ ಮುಟ್ಟಬೇಕಾಗಿದೆ; ತಟ್ಟಬೇಕಾಗಿದೆ. ಮಬ್ಬಿನ ಮುಸುಕಿನಲ್ಲಿ ಮಲಗಿದ ಜನಾಂಗವನ್ನು ಎಚ್ಚರಿಸುವ ಪುಣ್ಯ ಕಾರ್ಯ ನೂರು ಬಗೆಯಾಗಿ ನಡೆಯಬೇಕಾಗಿದೆ. ಈ ದಿಸೆಯಲ್ಲಿ ಇದೊಂದು ಕಿರು ಪ್ರಯತ್ನ. ಇಲ್ಲಿ ಶ್ರೀಗಳ ಪವಾಡಮಯ ಜೀವನಕ್ಕಿಂತಲೂ ಅವರು ಸಾಹಿತ್ಯಲೋಕಕ್ಕೆ ಸಲ್ಲಿಸಿದ ಮಹಾಸೇವೆಯನ್ನು ಕುರಿತಾಗಿ ವಿಶ್ಲೇಷಿಸಲಾಗಿದೆ. ಕರಿಯನ್ನು ಕನ್ನಡಿಯಲ್ಲಿ ತೋರಿಸುವ ಈ ಸಾಹಸವನ್ನು ಕನ್ನಡಿಗರು ಮೆಚ್ಚಿಕೊಳ್ಳುವರೆಂದು ಭಾವಿಸಿದ್ದೇನೆ.

ಉಪನ್ಯಾಸ ಶಿಬಿರದ ವ್ಯವಸ್ಥೆಯನ್ನು ಮಾಡಿದ ಸನ್ಮತಿ ವಿದ್ಯಾಲಯದ ಮುಖ್ಯಾಧ್ಯಾಪಕರನ್ನು, ಶೇಡಬಾಳದ ಜನತೆ ತೋರಿದ ಆಸಕ್ತಿಯನ್ನು ನೆನೆಯಬೇಕು. ಅಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮೆಚ್ಚುಗೆಯ ಸಮಾರೋಪ ಭಾಷಣಮಾಡಿ ಪ್ರೋತ್ಸಾಹಿಸಿದ ಖ್ಯಾತ ಸಾಹಿತಿ ಶ್ರೀ ಮಿರ್ಜಿ ಅಣ್ಣಾರಾಯರು ಇಂದು ನಮ್ಮ ಮಧ್ಯದಲ್ಲಿಲ್ಲ. ಈ ಕೃತಿ ಬೆಳಕಿಗೆ ಬರುವ ಪೂರ್ವದಲ್ಲಿಯೇ

ನಮ್ಮನ್ನು ಅಗಲಿಹೋಗಿದ್ದಾರೆ. ಆ ದಿವ್ಯ . ಚೈತನ್ಯ ಶಕ್ತಿಯ. ಸ್ಮರಣೆಗೆ ಈ ಕೃತಿಸಮರ್ಪಿತ

ನನಗೆ ಈ ಬಗೆಯ ಸುವರ್ಣಾವಕಾಶವನ್ನು ಒದಗಿಸಿದ ಪ್ರಾಸಂಗ ವಿಸ್ತರಣ ವಿಭಾಗದ ನಿರ್ದೇಶಕರಾದ ಮಾನ್ಯ ಶ್ರೀ ಚೆನ್ನವೀರ ಕಣವಿಯವರಿಗೂ,ಸಹಾಯಕನಿರ್ದೇಶಕ ಶ್ರೀ ಲಿಂಗರಾಜ ಗುಡ್ಡಿನ ಅವರಿಗೂ, ಹಸ್ತ ಪ್ರತಿಯನ್ನು ಪರಿಶೀಲಿಸಿ ಸೂಕ್ತ ಸಲಹೆಗಳನ್ನಿತ್ತ ಡಾ. ಬಿ. ವ್ಹಿ. ಮಲ್ಲಾಪೂರ ಅವರಿಗೂ ನನ್ನ ಅನಂತ ಕೃತಜ್ಞತೆಗಳು. ಅನಿವಾರ್ಯ ಕಾರಣಗಳ ಮೂಲಕ ಈ ಕೃತಿ ರಚನೆಯಾಗಲು ತಡವಾಯಿತು. ಆ ಬಗೆಗೆ ತಮ್ಮೆಲ್ಲರ ಕ್ಷಮೆ ಕೋರುವೆ. ಓದುಗಬಳಗ ತಮ್ಮ ಅಭಿಪ್ರಾಯಗಳನ್ನು ಬರೆದು ತಿಳಿಸಿದರೆ ಅವರ ಸಲಹೆಸೂಚನೆಗಳನ್ನು ಮುಂದಿನ ಆವೃತ್ತಿಯಲ್ಲಿ ಅವಶ್ಯವಾಗಿ ತಿದ್ದಿಕೊಳ್ಳಲಾಗುವುದು.

ಪಠ್ಯಪುಸ್ತಕ ನಿರ್ದೇಶನಾಲಯ
ಕ. ವಿ. ವಿ. ಧಾರವಾಡ ೩
೨೦–೯–೧೯೭೫

ಎಸ್. ಎಸ್. ಭೂಸರಡ್ಡಿ

ಪರಿವಿಡಿ

ಮುಳುಗುಂದದ



ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು



ಶ್ರೀಗಳವರ ಗದ್ದುಗೆ

೧. ಪ್ರಸ್ತಾವನೆ

ಪುಣ್ಯಭೂಮಿ ಭಾರತ ಅನೇಕ ಮಹಾನುಭಾವಿಗಳಿಗೆ: ಮೇಧಾವಿಗಳಿಗೆ: ಮಹಾಪುರುಷರಿಗೆ ಜನ್ಮವಿತ್ತ ಕೀರ್ತಿಗೆ ಭಾಜನವಾಗಿದೆ. ಈ ಮಾತು ಭಾರತಮಾತೆಯ ತನುಜಾತೆಯಾದ ಕರ್ನಾಟಕ ಮಾತೆಗೂ ಸಂಪೂರ್ಣ ಅನ್ವಯಿಸುತ್ತದೆ. ಈ ಚಿನ್ಮಯ ನಾಡಿನಲ್ಲಿ ಜನ್ಮವೆತ್ತಿ ಬಂದಷ್ಟು ಪುಣ್ಯ ಪುರುಷರು ಇನ್ನಾವ ದೇಶದಲ್ಲಿಯೂ ಜನ್ಮವೆತ್ತಿ ಬಂದಿಲ್ಲವೆಂಬುದು ಇತಿಹಾಸ ತಜ್ಞರ ಅಭಿಪ್ರಾಯ. ಈ ನಾಡಿನ ಜನ ಮನೆಯ ಹಳ್ಳಿಯಲ್ಲಿಯೂ ಸಹ ಸಾಧುಸಂತರು: ಶರಣಪುಂಗವರು: ಶಿವಯೋಗಿಕುಲತಿಲಕರು ಬಾಳಿ ಬೆಳಗಿದ ಬಗೆಗೆ ಸಾಕ್ಷಿಯಾಗಿ ಕುರುಹುಗಳಿವೆ: ಸ್ಮಾರಕಗದ್ದುಗೆಗಳಿವೆ: ಶಾಸನಗಳಿವೆ: ಇದು ನಿಜವಾಗಿಯೂ ಕನ್ನಡಿಗರು ಅಭಿಮಾನ ಪಡುವ ವಿಷಯವಾಗಿದೆ. ಬಂಗಾಲವು ಭಾರತದ ಮೆದುಳಾದರೆ ಕರ್ನಾಟಕವು ಭಾರತದ ಹೃದಯವೆಂದು ಬಣ್ಣಿಸಲಾಗುತ್ತಿದೆ. ಕರ್ನಾಟಕವು ವಿಶ್ವಸಂಸ್ಕೃತಿಯ ನಂದನವನ. ಈ ನಂದನವನದ ಅಚ್ಚೋದ ಸರೋವರದಲ್ಲಿ ರಾಜಹಂಸಗಳಂತೆ ಸ್ವಚ್ಛಂದವಾಗಿ ವಿಹರಿಸಿದವರೆಂದರೆ—ಶರಣರು; ದಾಸರು; ಸಂತರು: ಶಿವಯೋಗಿ

ಗಳು. ಈ ಮಹಾಮಹಿಮರ ಸುಂದರ ಬಂಧುರ ಜೀವನ ಚಿತ್ರಗಳು ಹೃದಯಂಗಮವಾಗಿವೆ. ಆತ್ಮ ಕಲ್ಯಾಣದೊಂದಿಗೆ ಲೋಕ ಕಲ್ಯಾಣ ಆರಾಧಿಸಿದಸಾಧಿಸಿದ.ಬೋಧಿಸಿದ, ಈ ಪುಣ್ಯಾತ್ಮರ ಪವಿತ್ರ ಜೀವನ ಇಂದಿಗೂ ಸ್ಫೂರ್ತಿದಾಯಕ; ಚೇತನದಾಯಕ. ಲೋಕವೇ ನನ್ನ ಮನೆ; ಮಾನವ ಕುಲವೇ ನನ್ನ ಕುಟುಂಬವೆಂಬ ಉದಾತ್ತ ಉನ್ನತ ಉದ್ದೇಶದಿಂದ ಬಾಳಿ ಬೆಳಗಿದ ಈ ಮಹಾಮಹಿಮರು ತಮ್ಮ ಚಿರಂತನ ಸಂದೇಶವನ್ನು ಬೀರಿ ಮಾನವಕುಲವನ್ನೇ ಉದ್ಧಾರ ಮಾಡಿದ್ದಾರೆ. ಆದುದರಿಂದಲೇ ಈ ನಾಡು ಸರ್ವಧರ್ಮ ಸಮನ್ವಯದ ಸುಂದರ ಸಂಗಮವಾಗಿದೆ. ದಯೆ. ಧರ್ಮ ಕ್ಷಮೆ, ದಮೆ, ಶಾಂತಿ, ದಾಂತಿ, ನಯ. ನೀತಿ. ನಿರಹಂಕಾರ ಮೊದಲಾದ ಮಾನವೀಯ ಶಾಶ್ವತ ಮೌಲ್ಯಗಳ ಸಾಗರವಾಗಿದೆ. ತ್ಯಾಗ, ಭೋಗ, ಪರೋಪಕಾರಗಳ ಆಗರವಾಗಿದೆ. ಧೀರರ. ವೀರರ ಯೋಧರ, ಮುತ್ಸದ್ಧಿಗಳ ತವರಾಗಿದೆ. ಈ ನಾಡಿಗೆ ವಿಶಿಷ್ಟವಾದ ಉಚ್ಚತಮ ನಾಗರಿಕತೆ ಇದೆ. ಉಜ್ವಲ ಪರಂಪರೆ ಇದೆ; ಶ್ರೇಷ್ಠ ಸಂಸ್ಕೃತಿಯ ನಿರಂತರ ಇತಿಹಾಸವಿದೆ: ಸುದೀರ್ಘ ಮತ್ತು ವೈಶಿಷ್ಟ್ಯಪೂರ್ಣ ಸಾಹಿತ್ಯ ಸೌರಭದ ಅಮೃತವಾಹಿನಿಯಿದೆ. ಬೆಂದ ನೊಂದ ಬಾಳಿಗೆ ಬೆಳಕು ತೋರುವ ಹೃದಯಕ್ಕೆ ತಂಪನ್ನೀಯುವ ನಿಜವಾದ ಮುಕ್ತಿಮಾರ್ಗದ ಕೈಗಂಬದಂತಿರುವ ತತ್ತ್ವಜ್ಞಾನವಿದೆ. ಇಂಥ ನಾಡಿನ ಮಹಾಶಿವಯೋಗಿಗಳ ಉಜ್ವಲ ಪರಂಪರೆಯಲ್ಲಿ ಸಾಗಿ ಬಂದವರು. ಹಾಡಿ ನಲಿದವರು, ಬಾಲಲೀಲಾ ಮಹಾಂತ ಶಿವ ಯೋಗಿಗಳು. ಸಾಧನೆಯ ಪ್ರಗತಿಪಥದಲ್ಲಿ ನಡೆದು ತಮ್ಮ ಅಪಾರ ಅನುಭವದ ಅಮೃತವನ್ನು ಹಾಡುಗಳ ರೂಪದಲ್ಲಿ ನುಡಿದು,ಧರ್ಮ

ತತ್ತ್ವದ ವಿಜಯ ಪತಾಕೆಯನ್ನು ಎತ್ತಿಹಿಡಿದವರು: ಈ ನಾಡಿನ ಸಂಸ್ಕೃತಿಯ ಸೌಗಂಧವನ್ನು ಹರಡಿದವರು. ಗೌರವವನ್ನು ಸೂಸಿದವರು ಮಾನವನ್ನು ಮನುಷ್ಯನಮಾಡಿದರೆ ಮಹಾಮಾನವನಾಗಿ ದೇವಮಾನವನಾಗಿ ಬೆಳಗಬಲ್ಲನೆಂಬುದಕ್ಕೆ ಶ್ರೀಗಳ ಚರಿತ್ರೆ ಒಂದು ಉತ್ಕೃಷ್ಟ ನಿದರ್ಶನ.

ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧ ಕನ್ನಡ ಸಾಹಿತ್ಯ ಲೋಕದ ಕತ್ತಲೆಯ ಯುಗವೆಂದು ಹೇಳಲಾಗುತ್ತಿದೆ. ಈ ಕಾರ್ಗತ್ತಲೆಯಲ್ಲಿ ಅಜ್ಞಾನವನ್ನು ಹೊಡೆದೋಡಿಸಿ ಸುಜ್ಞಾನ ಜ್ಯೋತಿಯನ್ನು ಹೊತ್ತಿಸಿದ ತತ್ತ್ವಜ್ಞಾನದ ಪ್ರಭೆಯನ್ನು ಬೆಳಗಿದ ಪುಣ್ಯದ ಪುತ್ಥಳಿಯೇ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು. ಉನ್ನತ ನಿಲುವಿನ ಶ್ರೇಷ್ಠ ಶಿವಾನುಭಾವಿಗಳ ಉಜ್ವಲ ಪರಂಪರೆಯಲ್ಲಿ ಧ್ರುವತಾರೆಯಂತೆ ಬೆಳಗಿದ ಇವರ ತತ್ತ್ವಪದಗಳನ್ನು ಅರಿಯದ ಹಳ್ಳಿಗಳಿಲ್ಲ. ಹಾಡದ ಭಜನಾಮೇಳಗಳಿಲ್ಲ. ಇಂಪಾದ ಕಂಠದಿಂದ ಹಾಡದ ಗಾಯಕರಿಲ್ಲ. ಈ ಮಹಾಮಹಿಮರ ಜೀವನಚಿತ್ರ ರಮ್ಯಮನೋಹರ: ಸತ್ಯಸುಂದರ.

೨. ಹಿನ್ನೆಲೆ

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎನಿಸಿದೆ: ಧಾರವಾಡ. ಈ ಜಿಲ್ಲೆಯ ಗದಗ ತಾಲೂಕಿನ ಮುಳಗುಂದ. ಶ್ರೀಗಳ ಕಾರ್ಯಕ್ಷೇತ್ರ: ಪುಣ್ಯಕ್ಷೇತ್ರ: ಧರ್ಮಕ್ಷೇತ್ರ. ಇಂದಿಗೂ ಅದು ಜಾಗ್ರತ ಧಾರ್ಮಿಕ ಅವಿಮುಕ್ತಕ್ಷೇತ್ರವಾಗಿದೆ. ಗದುಗಿನ ನೈಋತ್ಯಕ್ಕೆ ೧೮–೨೦ ಕಿಲೋ ಮೀಟರ ದೂರದಲ್ಲಿರುವ ಮುಳಗುಂದಕ್ಕೆ ಹೋಗಿಬರಲು ಸಂಪರ್ಕ ಸಾಧನಗಳು ಬೇಕಾದಷ್ಟಿವೆ. ಇದು ಪ್ರಾಚೀನಕಾಲದಿಂದಲೂ ಪ್ರಖ್ಯಾತಿ ಪಡೆದ ಐತಿಹಾಸಿಕ ನಗರವೂ

ಆಹುದು. ಒಂಬತ್ತನೆಯ ಶತಮಾನದಿಂದ ಈ ಊರಿನ ಹೆಸರು ಮುಳ್ಗುಂದ; ಮುಳಗುಂದ ಎಂಬುದಾಗಿಯೇ ದೊರೆಯುತ್ತದೆ. ಈ ಊರಿನಲ್ಲಿ ಅನೇಕ ಶಾಸನಗಳಿವೆ; ಪ್ರಾಚೀನ ಅವಶೇಷಗಳಿವೆ; ಗುಡಿ ಗುಂಡಾರಗಳಿವೆ. ಇಲ್ಲಿ ದೊರೆತ ಶಾಸನಗಳು ಬೇರೆ ಬೇರೆ ಧರ್ಮ ಗಳ ಏಳು ಬೀಳುಗಳನ್ನು ಉಸುರುತ್ತವೆ. ಮುಳಗುಂದ ಕೆಲವು ಕಾಲ ಜೈನಧರ್ಮದ ಪ್ರಸಿದ್ಧ ಕೇಂದ್ರವಾಗಿತ್ತು. ನಯಸೇನನೆಂಬ ಜೈನಕವಿ. ಇಲ್ಲಿಯವನೇ ಆತನ ಕೃತಿರತ್ನ 'ಧರ್ಮಾಮೃತ' ಕನ್ನಡ ಸಾಹಿತ್ಯ ಪ್ರಪಂಚದಲ್ಲಿಯೇ ವೈಶಿಷ್ಟ್ಯಪೂರ್ಣವಾಗಿದೆ.[೧] ಅದು ಇಂದಿಗೂ ತನ್ನದೇ ಆದ ಸೊಬಗಿನಿಂದ ಸೊಗಸಿನಿಂದ ಕಾವ್ಯ ಪ್ರೇಮಿಗಳ ಹೃದಯದಲ್ಲಿ ನಳಿನಳಿಸುತ್ತಿದೆ. ನಯಸೇನ ನಗೆಗಾರನೆಂದೇ ಖ್ಯಾತಿಪಡೆದಿದ್ದಾನೆ. ಪುರಾತನಕಾಲದಿಂದಲೂ ಮಹಾ ಮಹಾ ಮುನಿಗಳು ವಾಸಿಸುತ್ತ ಬಂದಿದ್ದರಿಂದ ಕನ್ನಡ ಕಾವ್ಯ ಸಂಪದಗಳಲ್ಲಿಯೂ ಈ ನಗರವನ್ನು 'ಮುನಿವೃಂದ'ವೆಂದು ಕರೆದಿರುವುದು ಗಮನಾರ್ಹವಾಗಿದೆ. ಹೆಸರಿನಲ್ಲಿ ಮುಳ್ಳು ಇದ್ದರೂ ಕುಂದ. ಅಂದರೆ ಮಲ್ಲಿಗೆಯಂತೆ ಸುತ್ತಲೂ ಸೌರಭವನ್ನೇ ಬೀರಿ ಖ್ಯಾತಿ ಪಡೆದಿದೆ. ಕನ್ನಡದ ಅರಸರಾದ ರಾಷ್ಟ್ರಕೂಟರು. ವಿಜಯ

---

೧. ಮುಳಗುಂದದೊಳಿರ್ದ ಮಹೋ
ಜ್ವಳ ಧರ್ಮಾಮೃತಮನರ್ತಿಯಿಂದಂ ಧರ್ಮಾ
ವಳಿಗಚ್ಚಿಸಿದಂ ಧರಿತ್ರೀ
ತಳ ಪ್ರಸಿದ್ಧಂ ಸುಕವಿನಿಕರ ಶಿಕಮಾಕಂದಂ, (ಧರ್ಮಾಮೃತ ೧೪-೧೬೮) ಎಂಬ ಪದ್ಯದಿಂದ ಅದು ಜೈನಮತೀಯರಿಗೆ ಧರ್ಮದ ಅಮೃತವನ್ನೆರೆಯುವ ಕಾವ್ಯವೆಂದು ತಿಳಿಯುತ್ತದೆ.

ನಗರ ಅರಸ ಕಾಲದಲ್ಲಿಯೂ ಆಡಳಿತದ ಒಂದು ಚಿಕ್ಕ ವಿಭಾಗವಾಗಿ ಶೈವ, ಜೈನಮತಗಳ ನೆಲೆವೀಡಾಗಿ, ಕಲೆ ಶಿಲ್ಪಗಳ ತವರಾಗಿ ಮೆರೆದ ನಾಡಿದು, ಮುಳಗುಂದ ನಾಡು. ಈಗ ಚಿಕ್ಕಹಳ್ಳಿಯಾದರೇನಾಯಿತು? ಪ್ರಾಚೀನ ಕಾಲದಲ್ಲಿ ಚತುರ್ಮುಖದ ಪಟ್ಟಣವೆಂದು, ರಾಜಧಾನಿ ಪಟ್ಟಣವೆಂದು ಹೆಸರಾಂತ ಪುರವಿದು: ಮುಳಗುಂದ[೨] ಏನೇ ಇರಲಿ: ರಾಜರಿಗೆ ರಾಜಧಾನಿಯಾಗಿ, ವಿಭೂತಿಗಳಿಗೆ ನೆಲೆವೀಡಾಗಿ, ಕವಿಗಳಿಗೆ ಬೀಡಾಗಿ, ಕಲೆಗಾರರ ಕೂಟವಾಗಿದೆ, ಈ ಮುಳಗುಂದ. ಕಾಲಭೈರವನ ಗುಡಿ, ಕುಂಭೇಶ್ವರ, ನಗರೇಶ್ವರ, ಪೇಟೆಬಸಪ್ಪನ ಗುಡಿ, ಸಿದ್ಧೇಶ್ವರಗುಡಿ, ರಾಮದೇವರ ಗುಡಿ ಮೊದಲಾದವು ಇಂದಿಗೂ ಪ್ರೇಕ್ಷಣೀಯ ಸ್ಥಾನಗಳು. ಸಮೀಪದ ಚಿಂಚಲಿ ಗುಡ್ಡದ ಬಂಡೆಯೊಂದರಲ್ಲಿ ಬೆಳಗಿನ ಸೂರ್ಯಕಿರಣ ಬಿದ್ದಾಗ ಕೋಲ್ಮಿಂಚಿನಂತೆ ಮೂಡಿ ಮಾಯವಾಗುವ ಛಾಯಾ ಚಂದ್ರನಾಥ ಇಲ್ಲಿಯ ಶಿಲ್ಪಿಗಳ ಗೆಲವುಗಬ್ಬವಾಗಿದ್ದಾನೆ. ಇದನ್ನು ರೂಪಿಸಿದ ಶಿಲ್ಪಿಯ ಕಲಾಕೌಶಲ್ಯವನ್ನು ಕಣ್ಣಾರೆ ಕಂಡೇ ಮನಗಾಣಬೇಕು: ಇವೆಲ್ಲವುಗಳಿಗೆ ಕಳಸವಿಟ್ಟಂತೆ ಎದ್ದು ಕಾಣುವ ಇನ್ನೊಂದು ಮಹಾಮಠವೇ ಶ್ರೀ ಕಲ್ಮಠ. ಈ ಮಠದ ಅಧಿಪತಿಗಳಾಗಿ ವಿರಾಜಮಾನರಾದವರೇ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು. ಮುಳಗುಂದವೆಂದ ಕೂಡಲೇ ಥಟ್ಟನೇ ಸ್ಮರಣೆಗೆ ಬರುವ ಪುಣ್ಯನಾಮವೇ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳದು. ಸುಳಿವ ಶಾಸನ

---

೨ ಮುಳಗುಂದ ನಾಡು– ಡಾ. ಶ್ರೀನಿವಾಸರಿತ್ತಿ, ಪು.೧ (ಕ. ವಿ.ವಿ. ಪ್ರ. ೧೯೬೯)

ವಾಗಿದ್ದ ಶ್ರೀಗಳ ಹೆಸರು ಮುಳಗುಂದದೊಂದಿಗೆ ಹಾಸು ಹೊಕ್ಕಾಗಿ ಬೆರೆತಿದೆ. ಕನ್ನಡಿಗರ ಸಮಷ್ಟಿ ಜೀವನವನ್ನು ರೂಪುಗೊಳಿಸಿದ ಮಹಾಶಕ್ತಿ ಇವರು. ಶ್ರೀಗಳು ಹಾವಾಡಿಗನಂತೆ ಚಮತ್ಕಾರಗಳನ್ನು ಪ್ರದರ್ಶಿಸಿ ಬೆರಗುಮಾಡಲಿಲ್ಲ. ಅಣಿಮಾದಿ ಅಷ್ಟಸಿದ್ಧಿಗಳನ್ನು ಸಾಧಿಸಿ ಜನರಂಜನೆ ಮಾಡುವ ಗೋಜಿಗೂ ಹೋಗಲಿಲ್ಲ. ಇವೆಲ್ಲವುಗಳನ್ನೂ ಮೀರಿನಿಂತ: ಇದ್ದು ಇಲ್ಲದ ಮಹಾಯೋಗಿಗಳಿವರು. ತಮ್ಮ ಆಧ್ಯಾತ್ಮ ತೇಜಸ್ಸಿನಿಂದ ಉಜ್ವಲ ತಪಸ್ಸಿನಿಂದ ಶರಣ ಸಂಸ್ಕೃತಿಯ ಅಮೃತ ಕಿರಣಗಳನ್ನು ಸೂಸಿ ಭಕ್ತರ ಮಾನಸ ಸರೋವರದಲ್ಲಿ ಶಿವಭಕ್ತಿಯ ಮೊಗ್ಗೆ ದಳ ದಳವಾಗಿ ಅರಳುವಂತೆ ಮಾಡಿದ ಮಹಾಮಹಿಮರಿವರು. ಕೋಟಿಗೊಬ್ಬ ಶರಣ, ಲಕ್ಷಕ್ಕೊಬ್ಬ ಭಕ್ತ ಎಂಬ ಮಾತಿಗೆ ಉತ್ತಮ ಉದಾಹರಣೆಯಾಗಿದೆ, ಶ್ರೀಗಳ ಘನ ವ್ಯಕ್ತಿತ್ವ.

೩. ಶ್ರೀಗಳ ಜನನ ಮತ್ತು ಕಾಲವಿಚಾರ

ಬಾಲಲೀಲಾ ಮಹಾಂತ ಶಿವಯೋಗಿಗಳು ಐತಿಹಾಸಿಕ ಪುಣ್ಯ ಪುರುಷರು. ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಮೂಡಿದ ಕನ್ನಡ ಕೈವಲ್ಯ ಸಾಹಿತ್ಯದ ಕಟ್ಟಾಣಿ ಮುತ್ತು. ಅವರ ಕಾಲದ ಬಗೆಗೆ ಕರ್ನಾಟಕ ಕವಿಚರಿತೆಕಾರರು ಹೀಗೆ ಉಲ್ಲೇಖಿಸಿದ್ದಾರೆ. "ಈತನು ಕೈವಲ್ಯದರ್ಪಣವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ. ಧಾರವಾಡ ಜಿಲ್ಲೆಗೆ ಸೇರಿದ ಮುಳಗುಂದ ವಿರಕ್ತಮಠಕ್ಕೆ ಸ್ವಾಮಿಯಾಗಿದ್ದನು. ಬಾಲರಂತೆ ಲೀಲೆ ಮಾಡುತ್ತಿದ್ದುದರಿಂದ ಈತನಿಗೆ ಬಾಲಲೀಲಾ ಮಹಾಂತ ಶಿವಯೋಗಿ ಎಂದು ಹೆಸರು

ಉಂಟಾಯಿತು. ಇವನು ಮೈಸೂರಿಗೆ ಹೋಗಿ ಮುಮ್ಮಡಿ ಕೃಷ್ಣರಾಜನಿಂದ (೧೭೯೯–೧೮೬೮) ಸನ್ಮಾನಿತನಾಗಿ ಅವನಿಗೆ ಬುದ್ಧಿವಾದವನ್ನು ಹೇಳಿದಂತೆ ಈ ಗ್ರಂಥದಿಂದ ತಿಳಿಯುವದರಿಂದ ಕವಿಯ ಕಾಲವು ಸುಮಾರು ೧೮೩೦ ಆಗಬಹುದು"[1] ಕೈವಲ್ಯದರ್ಪಣದ ಸಂಪಾದಕ ಲಿಂ. ಶಿ. ಶಿ. ಬಸವನಾಳರು ಇವರ ಜೀವನ ಕಾಲ ಕ್ರಿ. ಶ. ೧೮೩೩ ಅಥವಾ ೧೮೩೪ ಎಂದು ಅಭಿಪ್ರಾಯಪಟ್ಟಿದ್ದಾರೆ.[2]

ನಮ್ಮ ನಾಡಿನ ಜನತೆಯ ಐತಿಹಾಸಿಕ ಅವಜ್ಞೆ ಮತ್ತು ಉದಾಸೀನತೆಯ ಮೂಲಕ ಶ್ರೀಗಳವರ ಖಚಿತವಾದ ನಿರ್ದಿಷ್ಟವಾದ ನಿರ್ದುಷ್ಟವಾದ ಜನನ ಕಾಲವನ್ನು ಹೇಳುವುದು ದುಸ್ತರವಾಗಿದೆ. ಹಾಗೆಯೇ ಶ್ರೀಗಳ ತಂದೆ–ತಾಯಿಗಳ ಬಗೆಗೂ ಈ ತೊಂದರೆ ತಪ್ಪಿಲ್ಲ. ಈ ಬಗೆಗೆ ದೊರೆತಿರುವ ಆಧಾರ ಪ್ರಮಾಣಗಳಿಂದ ಪುರಾಣಕೃತಿಗಳಿಂದ ಕೆಲವು ಮಾತುಗಳನ್ನು ಪ್ರಸ್ತಾಪಿಸಬಹುದು. ಈ ಬಗೆಗೆ ಭಿನ್ನಾಭಿಪ್ರಾಯಗಳಿಗೇನೂ ಕೊರತೆಯಿಲ್ಲ. ಆ ಮಾತು ಬೇರೆ.

ವಿಜಾಪೂರ ಜಿಲ್ಲೆಯ ಆಲಮಟ್ಟಿ: ಶರಣ ಸಂಸ್ಕೃತಿಯ ಕೇಂದ್ರ. ಅಲ್ಲಿ ಚೆನ್ನಮಲ್ಲಿಕಾರ್ಜುನ ಮತ್ತು ಅನ್ನಪೂರ್ಣಾಂಬೆಯರೆಂಬ ಶಿವಭಕ್ತಿಸಂಪನ್ನರಾದ ಪುಣ್ಯದಂಪತಿಗಳಿದ್ದರು. 'ಸತಿ–ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ಮಾತಿಗೆ ವ್ಯಾಖ್ಯಾನದಂತಿತ್ತು ಅವರ ಪುಣ್ಯಜೀವನ. ಅಲ್ಲಿಯ ಹಿರೇಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಶ್ರಾವಣಮಾಸದಲ್ಲಿ ಪುರಾಣ ಪ್ರವಚನ

೧ ಕರ್ನಾಟಕ ಕವಿಚರಿತೆ–ಭಾಗ ೩ ಪುಟ ೪೫೭–೪೫೮ (ಕ. ಸಾ. ಪ. ಪ್ರ)
೨ ಕೈವಲ್ಯದರ್ಪಣ–ಸಂ. ಶಿ. ಶಿ. ಬಸವನಾಳ ಪು.೭. (ಬಾ.ಲೀ.ಗ್ರ.ಮಾಲೆ)

ವೈಭವದಿಂದ ಜರುಗಿತು. ಅನ್ನಪೂರ್ಣಾಂಬೆ ಪ್ರತಿನಿತ್ಯ ತಪ್ಪದೆ ಪುರಾಣ ಶ್ರವಣಮಾಡುತ್ತಿದ್ದಳು. ಮಕ್ಕಳಿಲ್ಲದ ಅನ್ನಪೂರ್ಣಾಂಬೆ ಪುರಾಣದಲ್ಲಿ ಬರುವ ಅಮ್ಮವ್ವೆಯ ಕಥೆಯನ್ನು ಕೇಳಿ ಭಾವಪರವಶಳಾದಳು. ಪರಮಶಿವನು ಅಮ್ಮವ್ವೆಗೆ ಮಗನಾಗಿ ಮೊಲೆಯುಂಡು ಬಾಲಲೀಲೆಗಳನ್ನು ಮೆರೆದುದನ್ನೇ ನೆನೆಯುತ್ತ ಮನೆಗೆ ಬಂದಳು. ಅವಳ ಭಾವ ಪರಿಶುದ್ಧವಾಗಿತ್ತೆಂಬುದಕ್ಕೆ ಸಾಕ್ಷಿಯಾಗಿ ಮುಳುಗುಂದದ ಗುರುಮಹಾಂತಲಿಂಗದೇಶಿಕರು ಅನಿರೀಕ್ಷಿತವಾಗಿ ಅಂದು ಅಲ್ಲಿಗೆ ಆಗಮಿಸಿದರು. ಭಕ್ತಿವಂತ ಗುಣವಂತ ದಂಪತಿಗಳು ಬಹುಭಯಭಕ್ತಿಯಿಂದ ಗೌರವಾದರಗಳಿಂದ ಶ್ರೀಗಳನ್ನು ಸತ್ಕರಿಸಿದರು. ಅವರ ಬಹುದಿನಗಳ ಬಯಕೆಯನ್ನು ಕೊರತೆಯನ್ನು ದೂರದೃಷ್ಟಿಯಿಂದ ದಾರ್ಶನಿಕರಾದ ಶ್ರೀಗಳು ಅರಿತಿದ್ದರು. ಶ್ರೀಗಳು ಅನ್ನಪೂರ್ಣಾಂಬೆಯನ್ನು ಕರುಣೆಯಿಂದ ಬಳಿಗೆ ಕರೆದು ಅವಳ ಉಡಿಯಲ್ಲಿ ಒಂದು ಮುದ್ದು ಮಗುವನ್ನು[1] ಹಾಕಿ "ಈ ಕಾರಣಿಕ ಶಿಸುವನ್ನು ಜೋಕೆಯಿಂದ ಜೋಪಾನಮಾಡು"[2] ಎಂದು ಆಶೀರ್ವದಿಸಿದರು. ಈ ಮಗುವಿನ ಜನನವಾದುದು ಶಾ. ಶ. ೧೭೪೫ನೆಯ ಸುಭಾನುನಾಮಸಂವತ್ಸರ ಶ್ರಾವಣಮಾಸದ ಕಡೆಯ ಸೋಮವಾರವೆಂದು ಪುರಾಣದಲ್ಲಿ ಬಂದಿದೆ.

---

೧ ಈ ಶಿಶು ಬಿಜಾಪೂರ ಜಿಲ್ಲೆಯ ಮನಗೂಳಿ ಹತ್ತಿರದ ಎರನಾಳದಲ್ಲಿ ದೊರೆಯಿತೆಂದೂ ಹೇಳಲಾಗಿದೆ (ಹೊಸಗನ್ನಡ ಸಾಹಿತ್ಯದ ಉದಯಕಾಲ- ರಾ. ಯ. ಧಾರವಾಡಕರ ಪು. ೧೨೩ ಕ. ವಿ. ವಿ. ಪ್ರ. ೧೯೬೮)

೨ 'ಮಗಳೆ ಬಾ ಸೆರಗೊಡ್ಡು, ಹಿಡಿ ಕೊಡುವೆನು ಕುಮಾರನನ್'—ಶ್ರೀ ಬಾಲಲೀಲಾ ಮಹಾಂತೇಶ್ವರ ಪುರಾಣ ಸಂಧಿ ೨. ಕವಿರತ್ನ ಚೆನ್ನಕವಿ. ಬಾಲಲೀಲಾ ಗ್ರಂಥಮಾಲೆ—೫(೧೯೪೭).

ಇದು ಪುರಾಣಗಾದೆ. ಕಥೆ ಆದರೆ ವಿವೇಚನೆ ಮಾಡಿದರೆ ಶ್ರೀಗಳ ಅನುಗ್ರಹದಿಂದ ಆ ದಂಪತಿಗಳ ಪುಣ್ಯಗರ್ಭದಲ್ಲಿಯೇ ಹುಟ್ಟಿನಲ್ಲಿಯ ಮುತ್ತಿನಂತೆ ಈ ದಿವ್ಯತೇಜೋದ್ಭಾಸಮಾನಮೂರ್ತಿ ಜನ್ಮವೆತ್ತಿಬಂದಿರಲು ಸಾಕು. ದಂಪತಿಗಳಿಗೆ ಆಗ ಎಲ್ಲಿಲ್ಲದ ಸಡಗರ; ಸಂಭ್ರಮ. ಅಪರೂಪದ ಈ ಅಪೂರ್ವ ಪುತ್ರರತ್ನವನ್ನು ಮುತ್ತಿನಿಂದಲೇ ಮೀಯಿಸಿದರು; ಪೋಷಿಸಿದರು. ಯಾವ ಕೊರತೆಯಾಗದಂತೆ ನೋಡಿಕೊಂಡರು. ವೈಭವದಿಂದ ಪುತ್ರೋತ್ಸವ ನೆರವೇರಿಸಿದರು. ಗುರು ಮಹಾಂತದೇಶಿಕರ ಕೃಪೆಯಿಂದ ಭುವನದ ಭಾಗ್ಯವಿಶೇಷದಿಂದ ಬಂದ ಈ ಶಿಶುವಿಗೆ 'ಮಹಾಂತಲಿಂಗ'ನೆಂದೇ ಹೆಸರಿಟ್ಟು ಜೋಗುಳ ಹಾಡಿದರು; ಮಂಗಲಪಾಡಿದರು. ಮಗು ಬೆಳೆದಂತೆಲ್ಲ ಇದು ಸಾಮಾನ್ಯ ಶಿಶುವಲ್ಲವೆಂದು ಅರಿತರು. ಆತನ ಬಾಲ್ಯದಲ್ಲಿಯೇ ತೋರಿದ ವೀರವಿರತಿ ದಂಪತಿಗಳಿಗೆ ಆಶ್ಚರ್ಯವನ್ನುಂಟು ಮಾಡಿತು. ಇದು ನಮಗೆ ದಕ್ಕುವ ಮಗನಲ್ಲವೆಂದು ಭಾವಿಸಿದರು. ಇನ್ನೇನು ಮನೆ ಬಿಟ್ಟು ಹೋಗುವನೆಂಬ ಭಯವೂ ಹುದುಗಿತ್ತು. ಎಂಟು ವರ್ಷದ ಎಳೆಯ ಬಾಲಕ ಮಹಾಂತಲಿಂಗನಿಗೆ ವಯಸ್ಸಿಗೆ ಮೀರಿದ ಅಧ್ಯಾತ್ಮಿಕ ಅಭೀಪ್ಸೆ ಅದಮ್ಯವಾಗಿತ್ತು. ಆಗಲೇ ಆತ್ಮಶಕ್ತಿಯು ಪ್ರಕಾಶ ಮೈದೋರಿತ್ತು. ಕೊನೆಗೊಮ್ಮೆ ಸಮರ್ಥ ಗುರುಗಳನ್ನು ಅರಸುತ್ತ ಹೊರಟೇ ಬಿಟ್ಟ; ಆ ಬಾಲ ಶಿವಯೋಗಿ.

೪. ಶ್ರೀ ಚೆನ್ನವೀರಸ್ವಾಮಿಗಳ ಗುರುಕುಲ

ಆಗ ಚೆನ್ನವೀರಸ್ವಾಮಿಗಳು ಶಿವಯೋಗದಲ್ಲಿ ಬಲ್ಲಿದರೆಂದೂ, ಸದಾನಂದಜ್ಞಾನ ಪ್ರಕಾಶಕರೆಂದೂ ಲಿಂಗಪೂಜಾನಿಷ್ಠರೆಂದೂ

ಪ್ರಖ್ಯಾತಿ ಪಡೆದಿದ್ದರು. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯ ಗೋಸಾವಿ ಗುಡ್ಡದ ಬದಿಯ ಪ್ರಶಾಂತವಾದ ಅರಣ್ಯದಲ್ಲಿರುವ ಹಾಲವರ್ತಿ ಬಳಿಯ ವಿರಕ್ತಮಠವೇ ಅವರ ಆವಾಸಸ್ಥಾನವಾಗಿತ್ತು. ಸುತ್ತುಮುತ್ತಲಿನ ಜನರು ಭಯ-ಭಕ್ತಿಯಿಂದ ಶ್ರೀಗಳ ಸೇವೆ ಮಾಡಿ ಧನ್ಯರಾಗುತ್ತಿದ್ದರು. ಆ ಮಹಾಮಠದ ಸಮೀಪ ವರತಿಯಂತೆ ಇದ್ದ ಚಿಕ್ಕಬಾವಿಯ ನೀರು ಯಾವಾಗಲೂ ಹಾಲಿನಂತೆ ಇರುತ್ತಿದ್ದರಿಂದ ಅದಕ್ಕೆ ಹಾಲವರ್ತಿ ಎಂಬ ಹೆಸರು ಬಂದಿತ್ತು. ಶಿವಯೋಗ ಸಾಮ್ರಾಟರಾದ ಚನ್ನವೀರಸ್ವಾಮಿಗಳು ಭಕ್ತೋದ್ಧಾರಕ್ಕಾಗಿ ಆ ಸ್ಥಳದಿಂದ ಮುಂದೆ ಸಾಗಿ ಅದೇ ತಾಲೂಕಿನ ಕಲ್ಲಹಳ್ಳಿಗೆ ಆಗಮಿಸಿದರು. ಭಕ್ತಕೋಟಿ ಶ್ರೀಗಳ ಅಮೃತವಾಣಿಯ ಸಂದೇಶ ಕೇಳಿ ಪುನೀತವಾಯಿತು. ಅವರಿಗೊಂದು ಮಠವೂ ಅಲ್ಲಿ ನಿರ್ಮಾಣಗೊಂಡಿತು. ಈ ಗ್ರಾಮದಲ್ಲಿದ್ದಾಗಲೇ ಜನರು ಅವರನ್ನು ಹಾಲವರ್ತಿ ಚೆನ್ನವೀರಸ್ವಾಮಿಗಳೆಂದು ಕರೆಯತೊಡಗಿದರು. ಅಲ್ಲಿಂದ ಅವರು ಅರಣ್ಯದಲ್ಲಿ ಸಂಚರಿಸಿದರು; ಮರಡಿಗಳನ್ನು ದಾಟಿದರು. ಮಂಜುಳ ನಿನಾದಗೈಯುತ್ತ ಜುಳು ಜುಳು ಹರಿಯುತ್ತಿರುವ ತುಂಗಭದ್ರೆಯ ಸುಂದರ ರಮ್ಯ ಮನೋಹರ ದೃಶ್ಯ ಶ್ರೀಗಳಿಗೆ ಬಹಳ ಹಿಡಿಸಿತು. ಸುತ್ತಲೂ ನಿರೀಕ್ಷಿಸಿದರು. ಯಾವ ಲೌಕಿಕಗಜೆ-ಬಜೆಗಳಿಲ್ಲ; ಸದ್ದುಗದ್ದಲವಿಲ್ಲ. ಈ ಪ್ರಶಾಂತ ಸ್ಥಳದಲ್ಲಿಯೇ ಲಿಂಗಾರ್ಚನೆಗೆ ಕುಳಿತರು. ನೆರೆಯ ಗ್ರಾಮ ಹರವಿಯ ಪುರಾಣಮಠದ ಅಯ್ಯನವರ ಭಕ್ತಿಯ ಬೇಡಿಕೆಯನ್ನು ಅಂಗೀಕರಿಸಿ ಅಲ್ಲಿಯೇ ನೆಲಸಿದರು. ಅಲ್ಲೊಂದು ಸುಂದರಮಠವೂ ಎದ್ದು ನಿಂತಿತು. ಶ್ರೀಗಳ ವ್ಯಕ್ತಿತ್ವದ ಪ್ರಭೆ ಸುತ್ತೆಲ್ಲ ಮಲ್ಲಿಗೆಯ ಕಂಪಿನಂತೆ ಹರಡಿತು.

ಬರಬರುತ್ತ ಇದೊಂದು ಆಧ್ಯಾತ್ಮಿಕ ಮಹಾಕೇಂದ್ರವಾಯಿತು. ಇಲ್ಲಿ ಶರಣಸಂಸ್ಕೃತಿ-ಶರಣತತ್ವಗಳ ಬೋಧೆ ನಿರಂತರವಾಗಿ ಸಾಗಿತು. ಶ್ರೀಗಳ ತಪಃಪ್ರಭಾವದಿಂದ ನಾಡಿನ ಮೂಲೆ ಮೂಲೆಗಳಿಂದ ಜ್ಞಾನ ಭಿಕ್ಷುಗಳು, ಅಧ್ಯಾತ್ಮ ಜಿಜ್ಞಾಸುಗಳು, ಧರ್ಮತತ್ತ್ವದಲ್ಲಿ ವಿಶೇಷ ಅಭಿರುಚಿ ಆಸಕ್ತಿಯುಳ್ಳವರು ಈ ಕೇಂದ್ರದ ಆಕರ್ಷಣೆಗೆ ಒಳಗಾದರು. ಇದುವೇ ಲಿಂಗನಾಯಕನಹಳ್ಳಿ. ಆದರ್ಶ ಗುರುಕುಲವೆಂದು ಹೆಸರಾಯಿತು. ಈ ಗುರುಕುಲದ ವಿದ್ಯಾರ್ಥಿಯಾಗಿ ಬಾಲಯೋಗಿ 'ಮಹಾಂತಲಿಂಗ'ನು ಶಿವಯೋಗ ಸಾಧನೆಗೆ ತೊಡಗಿದನು. ಚೆನ್ನವೀರಮಹಾಶಿವಯೋಗಿಗಳ ಸಮರ್ಥ ಗರಡಿಯಲ್ಲಿ ಬೆಳೆಯತೊಡಗಿದನು. ಬನ್ನೀಮಟ್ಟಿ ಚೆನ್ನಪ್ಪನವರು. ಮೈಸೂರ ಕಡೆಯ ಶಿವಬಸವ ಸ್ವಾಮಿಗಳು. ಶಾಂತವೀರ ಚರಮೂರ್ತಿಗಳು. ಹೋಳಲು ಲಿಂಗಪ್ಪ ಶರಣರು. ರಾಚೋಟಿ ಸ್ವಾಮಿಗಳು, ಮೈಲಾರದ ಬಸವಲಿಂಗ ಶರಣರು ಇವರೇ ಮೊದಲಾದ ಮಹಾನುಭಾವಿಗಳ ಈ ಗುರುಕುಲದ ವಿದ್ಯಾರ್ಥಿಗಳೆಂದರೆ ಕೇಳಬೇಕೇ! ಅದೊಂದು ಅನುಭವ ಮಂಟಪವೇ ಸರಿ!! ಮಹಾಂತಲಿಂಗನಿಗೆ ಇಂತಹ ಆಧ್ಯಾತ್ಮ ಸಾಧಕರ ಸಹವಾಸ ದೊರೆಯಿತು. ಈ ಪುಣ್ಯಪರಿಸರದಲ್ಲಿ ಮಹಾಂತಲಿಂಗನ ಬಾಳು ಪುಟಕ್ಕಿಟ್ಟ ಚಿನ್ನವಾಯಿತು. ಆ ವಾತಾವರಣ ಪ್ರಭಾವದಿಂದ ವ್ಯಕ್ತಿತ್ವ ವಿಕಾಸವಾಯಿತು. ಶ್ರೀ ಮಹಾಶಿವಯೋಗಿ ಚೆನ್ನವೀರಸ್ವಾಮಿಗಳ ಗುರುಕುಲದ ಬಗೆಗ ಮೈಲಾರದ ಬಸವಲಿಂಗ ಶರಣರು ಹೃದಯತುಂಬಿ ಹಾಡಿಕೊಂಡಿದ್ದಾರೆ: ಮುಕ್ತಕಂಠದಿಂದ ಹೊಗಳಿದ್ದಾರೆ. ಅವರ ಗುರುಕರುಣೆಯ ಕೆಲವು ಹಾಡುಗಳನ್ನು ನಿದರ್ಶನಕ್ಕಾಗಿ ಉಲ್ಲೇಖಿಸಿದೆ.

"ಮಂಗಳೋತ್ಕರ ಶಿಲಾಪಳ್ಳಿ ಪಾತದಿಂದ
ಲಿಂಗನಾಯಕಪುರಕಾಗಿ ನಡೆತಂದ
ಪುಂಗ ಪುರಾಣದಯ್ಯನ ಭಕ್ತಿಯಿಂದ
ತುಂಗಭದ್ರಾ ನದಿಯ ತೀರದೊಳುನಿಂದ

ಹುಲಿ ಹುಲ್ಲೆ ಸುಖವಾಗಿ ಬಾಳ್ವಪಾವನದಿ
ಬಲು ಸರ್ಪ ಗರುಡ ಕೂಡಿಹವು ಗೆಳೆತನದಿ
ಇಲಿ ಮರಿಯ ಬೆಕ್ಕು ಸಾಕುವುದು ಒಮ್ಮನದಿ
ಸುಲಭ ಚರಮೂರ್ತಿ ನೆಲಿಸಿರುವ ಕಾರಣದಿ

ಪಲ್ಲವಿಸಿ ಬೆಳೆದ ವೃಕ್ಷದ ನೆಳಲ ತಂಪು
ಮೊಲ್ಲೆ ಮಲ್ಲಿಗೆ ನಾಗಸಂಪಿಗೆಗಂಪು
ಚೆಲ್ಲಿ ಮುಂಬರಿವುತಿಹ ನದಿಯುದಕದಿಂಪು
ಎಲ್ಲಿ ನೋಡಿಡದಲ್ಲಿ ಸೊಗಸುತಿಹಸೊಂಪು

ಕರುಣನಿಧಿ ಭಕ್ತವತ್ಸಲ ನೀ ನಮ್ಮಯ್ಯ
ಗುರು ಚೆನ್ನವೀರ ನಾ ನಿಮ್ಮ ಸೋಮಯ್ಯ
ಪರಮಪಾವನ ಪರಬ್ರಹ್ಮಸ್ವರೂಪನೆ। ಚೆನ್ನವೀರ
ನಿರುಪಮ ನಿರಘ ನಿರ್ದ್ವಂದ್ವ ನಿರ್ಲೇಪನೆ।

ಶರಣ ಹೃದಯಮಂದಿರದಧಿಕಾರನೆ। ಚೆನ್ನವೀರ
ಕರುಣಸಾಗರವೇದಾಗಮ ಶ್ರುತಿಸಾರನೆ। ಚೆನ್ನವೀರ"

೧. ಮೈಲಾರ ಬಸವಲಿಂಗ ಶರಣರ ಕೃತಿಗಳು– ಸಂ. ಸಿ. ಶಿ. ಬಸವನಾಳ
ಪುಟ. ೨೨೨(ಜಾ. ಲಿಂ. ಗ್ರಂ. ಮಾಲೆ, ಮುರುಘಾಮಠ)

ಮೇಲಿನ ಪದ್ಯಗಳನ್ನು ಗಮನಿಸಿದರೆ- ಆ ಗುರುಕುಲದ ಸ್ಪಷ್ಟ ಚಿತ್ರ ಓದುಗರಿಗಾಗದಿರದು.

ಶ್ರೀ ಚೆನ್ನವೀರಸ್ವಾಮಿಗಳು ಮಹಾಂತಲಿಂಗನ ವೈರಾಗ್ಯ ಸಂಪನ್ನತೆ. ಅದ್ಭುತವಾದ ಸ್ಮರಣ ಶಕ್ತಿ ಕಂಡು ಸಂತೋಷಸಾಗರದಲ್ಲಿ ತೇಲಿದರು. ಈ ಶಿಷ್ಯರತ್ನವೇ ಆಶ್ರಮದ ಕೀರ್ತಿಕಿರೀಟವೆಂದು ಬಗೆದು ಈ ವೈರಾಗ್ಯಮೂರ್ತಿಗೆ ಶ್ರೀ ಶಾಂತವೀರಸ್ವಾಮಿಗಳ ಮುಖಾಂತರ ಅನುಗ್ರಹ ದಯಪಾಲಿಸಿದರು; ಶ್ರೀ ಚೆನ್ನವೀರಸ್ವಾಮಿಗಳು. ಅಂತೆಯೇ ಮುಂದೆ 'ಮಹಾಂತ'ರು ಹೀಗೆ ಹಾಡಿಕೊಂಡಿದ್ದಾರೆ:

"ಧನ್ಯನಾದೆನು ಶಾಂತವೀರಸ್ವಾಮಿ
ನಿನ್ನ ಪಾದಾರವಿಂದವ ಕಂಡುದ್ಧಾರ ||ಪ||

ಎಚ್ಚರಮರೆದಿರ್ದೆನಯ್ಯ ।ನಿನ್ನ।
ಕಚ್ಚಿ ತ್ರೈಮಲಗಳು, ಪಚ್ಚಿಮುದಯ್ಯ।
ಎಚ್ಚರ ಕೊಟ್ಟೆನ್ನ ಜೀಯ ।ನೀನೆ।
ಸಚ್ಚಿದಾನಂದನೆಂದೊರೆದೆ ದಮ್ಮಯ್ಯ ||೧||

ಹೃದಯವಾರಿಜದಿಂದ ಬಂದು ।ಎನಗೆ।
ಮದ ಮರವೆ ಕದವನು ತೆರೆದು ನೋಡೆಂದು ।
ಸದಮಳದಿಂ ಒಳಗಲ್ಲಿ ನಿಂದು । ನಿನ್ನ
ನಿರ್ಮಲರೂಪವ ತೋರಿದೆ ಇಂದು ||೨||

ಚಿದ್ಗವಿಯೊಳಗಿರುವಂಥ । ನಿತ್ಯ ।
ಮದ್ಗುರು ಚರರೂಪದಿ ಚರಿಸಿದಾತ ।
ಸದ್ಗುಣಗಣವುಳ್ಳ ಶಾಂತ । ಕರ
ಗದ್ದಿಗೆಯೊಳಗೆ ಮಹಾಂತಲಿಂಗಾಗಿ ನಿಂತ ॥೨॥

ಅನುಗ್ರಹಿಸಿದ ಮಹಾಗುರುವಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುವ ಮೇಲಿನ ಪದ್ಯ ಗುರುಭಕ್ತಿರಂಜಿತವಾಗಿದೆ. ಇವರ ಸಹಪಾಠಿಗಳಾಗಿದ್ದ ಮೈಲಾರ ಬಸವಲಿಂಗ ಶರಣರೂ ಮಹಾಶಿವಾನುಭವಿಗಳು. ಷಟ್‌ಸ್ಥಲ ನಿರಾಭಾರ ವೀರಶೈವ ಸಿದ್ಧಾಂತ, ಗುರುಕರುಣತ್ರಿವಿಧಿ ಹಾಗೂ ಶಿವಾನುಭವದರ್ಪಣ ಎಂಬ ಮೂರು ಕೃತಿ ಕುಸುಮಗಳನ್ನು ಅರಳಿಸಿ ವೀರಶೈವ ಸಿದ್ಧಾಂತ ನಿರೂಪಣೆಯನ್ನು ಹೃದಯಂಗಮವಾಗಿ ವಿಶ್ಲೇಷಿಸಿದ ಮಹಾಜ್ಞಾನಿಗಳು. ಅಷ್ಟ, ನಿಷ್ಟ ವೀರಶೈವ ಸಿದ್ಧಾಂತವನ್ನು ಮನೋಜ್ಞವಾಗಿ ವಿವರಿಸಿದವರು. ವೀರಶೈವದ ಶುದ್ಧ ನಡೆನುಡಿ, ಗೋತ್ರಗುರಿಗಳ ಬಗೆಗೆ ಸರಿಯಾದ ತಿಳುವಳಿಕೆಯನ್ನು ಕೊಡುವ ಇಂಥ ಅಪೂರ್ವ ಅನುಭಾವ ಗ್ರಂಥಗಳು ಕನ್ನಡದಲ್ಲಿ ವಿರಳ. ವೀರಶೈವ ಧಾರ್ಮಿಕ ಸಾಹಿತ್ಯದಲ್ಲಿ ಇವುಗಳಿಗೆ ಗಣ್ಯವಾದ ಸ್ಥಾನವಿದೆ. ಇಂಥ ಮಹಾನುಭಾವಿಗಳ ನಿಕಟಸಂಪರ್ಕ ಸಾನ್ನಿಧ್ಯದಿಂದ ಮಹಾಂತನು ವೀರಶೈವ ದರ್ಶನಶಾಸ್ತ್ರಾಭ್ಯಾಸದಲ್ಲಿ ನಿಪುಣನಾದನು. ನಿಷ್ಣಾತನಾದನು. ಅನುಭಾವದ ಮೇರುಗಿರಿಯನ್ನೇರಿದನು. ವಯಸ್ಸಿನಿಂದಲೂ ಅನುಭವದಿಂದಲೂ ಹಿರಿಯರಾದ ಬಸವಲಿಂಗ ಶರಣರು ಶ್ರೀ ಮಹಾಂತಮರಿದೇವರಿಗೆ ಸೂಕ್ತ ಮಾರ್ಗದರ್ಶನ ಮಾಡಿದರು. ಇದರಿಂದ ಮಹಾಜ್ಞಾನಿಗಳಾಗಿ, ದಾರ್ಶನಿಕ

೧. ಕೈವಲ್ಯದರ್ಪಣ – ಸಂ. ಶಿ. ಶಿ. ಬಸವನಾಳ ಪು. ೪೦–೪೧

ಪ್ರತ್ಯಕ್ಷಮೂರ್ತಿಗಳಾಗಿ ಮಹಾಂತ ಮರಿದೇವರು ನಾದಸ್ವರವಸಂತದೂ
ಸದ ಸಂಗಾನಯುಂತೆ ಸುತ್ತಿ ಸುಳಿದರು. ಚೆನ್ನನ ಅನುಭವವನ್ನು ಸಂಗ
ಳಿಸಿದರು. ಶ್ರೀ ಚೆನ್ನವೀರಸ್ವಾಮಿಗಳ ಪರಮಶಿಷ್ಯರಾದ ಇವರಿಗೂ
ಬದ್ಧ ಪರಮಪರೀಕ್ಷಾ ಕಾಲ ಒದಗಿತು. ಶ್ರೀ ಚೆನ್ನವೀರಸ್ವಾಮಿಗಳು
ತಮ್ಮ ಮಠದ ಉತ್ತರಾಧಿಕಾರಿಯನ್ನು ಕಂಡುಹಿಡಿಯುವದರಲ್ಲಿ
ವ್ಯಗ್ರರಾಗಿದ್ದ ಶಿಷ್ಯರಲ್ಲಿಯೇ ಒಬ್ಬನನ್ನು ಆರಿಸಿಕೊಂಡದ್ದೂ ಆಯಿತು.
ಆದರೆ ಅಧಿಕಾರ ಪಟ್ಟವನ್ನು ಪಡೆಯಬೇಕಾದ ಪಟುವಿಗೆ ಚಿಕ್ಕಂದಿ
ನಲ್ಲಿಯೇ ಮುಳಿ ಕಟ್ಟಿ ಗಾಯಗೊಳಿಸಿತ್ತು. ಅಂಥವನು ಸ್ವಾಮಿ
ಯಾಗುವುದು ಯೋಗ್ಯವಲ್ಲೆಂದು ಬಸವಪ್ಪನವರು ವಾದಿಸಿದರು.
ಶ್ರೀ ಚೆನ್ನವೀರಸ್ವಾಮಿಗಳ ಕಣ್ಣು ಕೆಂಪಾದವು. ದೇಹವು ಸಿಟ್ಟಿನಿಂದ
ತತ್ತರಿಸಿತು. ಶಿಷ್ಯನ ಮೇಲೆ ಕೆಂಡಕಾರುತ್ತ "ನೀನು ಬಸವಪ್ಪನಲ್ಲ;
ಮಸಣಪ್ಪ" ಎಂದು ಗದ್ದರಿಸಿ ಬಿಟ್ಟರು. ನೆರೆದ ಶಿಷ್ಯವೃಂದವು
ಮೂಕವಿಸ್ಮಿತವಾಯಿತು. ಬಸವಪ್ಪನವರು ನಿಂತಲ್ಲಿಯೇ ಭೂಮಿ
ಗಿಳಿದರು. ಶರಣರ ವಾಣಿ ಸುಳ್ಳಾದೀತೇ? ಅವರ ಮುಖ ದಿನ
ಗಳೆದಂತೆ ಕಪ್ಪಾಗತೊಡಗಿತು. ವಿಕಾರ ರೂಪ ತಾಳಿತು.
ಮಸಣವನ ಮುಖದಂತೆ ಕಾಣಿಸತೊಡಗಿತು. "ಅಕ್ಷಮ್ಯ ಅಪ
ರಾಧವಾಯಿತು. ಮಾಡಿದ ಅಪರಾಧ ಕ್ಷಮಿಸಬೇಕೆಂದು" ಗುರು
ಗಳ ಪಾದಗಳಲ್ಲಿ ಬಿದ್ದು ಹೊರಳಾಡಿದರು. ಗುರುವಿಗೆ ಕರುಣೆ
ಬರಲಿಲ್ಲ. ಹರಮುನಿದರೆ ಗುರುಕಾಯ್ವ ಆದರೆ ಗುರು
ಮುನಿದರೆ ಹರನೂ ಕಾಯಲಾರನು. ಬಸವಪ್ಪನವರು ಗುರು
ಕರುಣೆಯಿಲ್ಲದೆ ಬಾಳುವುದು ಸಾಧ್ಯವಿಲ್ಲೆಂದು ಚಿಂತಿಸಿದರು. ಅವರ
ಸಹಪಾಠಿಗಳಾಗಿದ್ದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿ

ಗಳು ಶಾಪ ನಿಶ್ಶಾಪವಾಗುವ ಮಾರ್ಗವನ್ನು ತೋರಿ ಕೃಪೆಮಾಡಿ ದರು. ಗುರುಸ್ತೋತ್ರಮಾಡಿ ಜಗತ್ತಿನಲ್ಲಿ ಬೇಕಾದುದನ್ನು ಪಡೆಯ ಬಹುದೆಂದು ತಿಳಿಸಿ ಹೇಳಿದರು. ಆಗ ಕವಿ ಬಸವಪ್ಪನವರ ಭಕ್ತಿ ಭಾವಕೋಡಿವೊಡೆದು ಹರಿಯಿತು. ಅದು ಕವಿತ್ವಕ್ಕೆ ಕೋಡು ಮೂಡಿತು.

"ಗುರುವೆ ಭಕ್ತರ ಕಲ್ಪತರುವೆ ಸಜ್ಜನ ಮನೋ
ಹರವೆ ನಿಜಭಕ್ತಿಜ್ಞಾನ ವೈರಾಗ್ಯ ಮಂ
ದಿರವೆ ಮದ್ಗುರುವೆ ಕೃಪೆಯಾಗು"

ಎಂದು ಪ್ರಾರ್ಥಿಸಿ ೩೩೩ ತ್ರಿಪದಿಗಳನ್ನು ಹಾಡಿದರು. ಪ್ರತಿ ಯೊಂದು ಪದವು ಶ್ರೀ ಗುರುವೇ ಕೃಪೆಯಾಗು ಎಂದು ಮುಗಿಯು ತ್ತವೆ. ನಂಬಿ ಕರೆದಡೆ ಓ ಎನ್ನನೇ ಗುರುವು. ಕರುಣಾಮೂರ್ತಿ ಗಳಾದ ಶ್ರೀ ಚೆನ್ನವೀರ ಸ್ವಾಮಿಗಳು ಕವಿಶಿಷ್ಯನನ್ನು ಮೆಚ್ಚಿ ಕೊಂಡರು ಅಪ್ಪಿಕೊಂಡರು. ಗುರುಕರುಣ ಪಡೆದ ಬಸವಪ್ಪ ನವರು, ಬಸವಲಿಂಗ ಶರಣರೆಂದು ಖ್ಯಾತಿ ಪಡೆದರು.

೫. ಪವಿತ್ರ ಕ್ಷೇತ್ರಗಳ ಸಂದರ್ಶನ

ಪರಮಗುರುಗಳಾದ ಶ್ರೀ ಚೆನ್ನವೀರ ಮಹಾಸ್ವಾಮಿಗಳು ಲಿಂಗದೊಳಗಾದನಂತರ ಮಹಾಂತದೇವರು ನಾಡಿನಾದ್ಯಂತ ಸಂಚ ರಿಸಿದರು. ಈ ಸಮಯದಲ್ಲಿ ತಮ್ಮ ಶಿವಯೋಗ ಶಕ್ತಿಯಿಂದ ಅನೇಕ ಲೀಲೆಗಳನ್ನು ಮೆರೆದರು. ಆ ಮೂಲಕ ಭಕ್ತರಮನವನ್ನು ತಿದ್ದಿದರು. ಬಿದರಪಳ್ಳಿಯಲ್ಲಿ ರಾಮಲಿಂಗಪ್ಪನೆಂಬ ಭಕ್ತ. ಆತನು ಬಾವಿ

ಯೊಂದನ್ನು ತೋಡುವ ಕಾರ್ಯ ಕೈಕೊಂಡಿದ್ದ. ಎಷ್ಟು ಅಗಿದರೂ ನೀರು ಬೀಳಲಿಲ್ಲ. ಅದೊಂದು ದೊಡ್ಡ ಸಮಸ್ಯೆಯಾಗಿತ್ತು. ಯೋಗಾಯೋಗವೆಂಬಂತೆ ಮಹಾಂತಲಿಂಗರು ಅಲ್ಲಿಗೆ ಆಗಮಿಸಿದರು. ರಾಮಲಿಂಗಪ್ಪ ಮಹಾಂತರಿಗೆ ಮೊರೆಹೋದನು. ಭಕ್ತನ ಚಿಂತೆಗೆ ಅವರ ಮನಕರಗಿ ಹೋಯಿತು. ತಾವೇ ಗುದ್ದಲಿ ಹಿಡಿದು ಅಗಿದರು. ಶ್ರೀಗಳ ಪರುಷ ಹಸ್ತ ಮುಟ್ಟಿದ ಬಳಿಕ ಕೇಳಬೇಕೆ! ಅಂತರಂಗದ ಗಂಗೆ ಪುಟಿದೆದ್ದಳು. ಬಾವಿ ಜಲಭರಿತವಾಯಿತು. ಅವರು ಭಕ್ತರ ಬಂಧುಗಳು: ಕರುಣಾಸಿಂಧುಗಳು. 'ಬಯಕೆಯಿಲ್ಲದೆ ಮಾಳ್ಪ ನಿಷ್ಕಾಮಕರ್ಮಕ್ಕೆ ಜಯಮುಂಟು' ಎಂಬ ಸಂದೇಶವನ್ನು ಸಾರಿದರು: ನಿಜ ಭಕ್ತಿಯ ಮಾರ್ಗವನ್ನು ತೋರಿದರು.

ಶಿವಯೋಗಿಗಳೊಮ್ಮೆ ಹೊಳೆ ದಾಟಬೇಕಾಗಿದೆ. ನಾವಿಕರು ಇವರಾರೋ ಬಡಪೈರಾಗಿಯೆಂದು ಉದಾಸೀನ ಮಾಡಿದ್ದಾರೆ. ಸರಿ: ಶಿವಯೋಗಿಗಳು ತಮ್ಮ ಟೊಪ್ಪಿಗೆಯನ್ನೇ ಹೊಳೆಯಲ್ಲಿ ಹರಿಗೋಲನ್ನಾಗಿ ಮಾಡಿ ಅದರಲ್ಲಿಯೇ ಕುಳಿತು ಆನಂದದಿಂದ ಆಚೆಯ ದಂಡೆಗೆ ಬಂದರು. ನಾವಿಕರ ನೌಕೆ ನಡುಹೊಳೆಯಲ್ಲಿ ನಿಂತಿತು. ಅವರಿಗೆ ಪಶ್ಚಾತ್ತಾಪವಾಗಿದೆ: ಪ್ರಾಯಶ್ಚಿತ್ತವೂ ಆಗಿದೆ. ನಾವಿಕರು ಶಿವಯೋಗಿಗಳಿಗೆ ಬಿದ್ದುಬೇಡಿಕೊಂಡರು ಶಿವಯೋಗಿಗಳು ದಯವೇ ಧರ್ಮದ ಮೂಲವೆಂದು ಬೋಧಿಸಿ ಅವರಿಗೆ ಆಶೀರ್ವದಿಸಿದರು.

ಅಲ್ಲಿಂದ ಶ್ರೀಶೈಲಕ್ಕೆ ತೆರಳಿ ಅಲ್ಲಿಯ ಮುನಿಗಳಿಗೆ ಏಕೋತ್ತರ ಶತಸ್ಥಲದ ಅಂತರಾರ್ಥವನ್ನು ಅರುಹಿದರು. ಮೈಸೂರಿನ

ಮುಮ್ಮಡಿ ಕೃಷ್ಣರಾಜ ಒಡೆಯರ ದೊಡ್ಡ ಬೇನೆಯನ್ನು ಕಳೆದು ಅಲ್ಲಿಂದ ಮಾಯವಾಗಿಬಿಟ್ಟರು. ಅರಸನ ಪರಿಚಾರಕರು ಅರಸಿ ನಿರಾಶರಾದರು. ಸಂಗಮ, ಗೋಕಾವಿ, ಬನವಾಸಿ. ಕಂಚಿ, ಮೊದಲಾದ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿದರು. ತಮ್ಮ ನಿಜಗುರುಗಳಾದ ಮುಳುಗುಂದದ ಕಲ್ಮಠದ ಮಹಾಂತ ದೇಶಿಕರ ದರ್ಶನ ಪಡೆಯುವ ತವಕ ಹೆಚ್ಚಾಯಿತು. ಅಲ್ಲಿಗೆ ಧಾವಿಸಿ ಬಂದಾಗ ದೇಶಿಕರು ಲಿಂಗೈಕ್ಯರಾಗಿದ್ದರು. ಆದರೆ ಅವರು ದೇಹವಿಡುವಾಗ 'ಭಕ್ತಕೋಟಿಗೆ ಇನ್ನು ಸ್ವಲ್ಪ ದಿವಸಗಳಲ್ಲಿಯೇ ಒಬ್ಬ ಬಾಲ ಶಿವಯೋಗಿ ತಮ್ಮ ಉತ್ತರಾಧಿಕಾರಿಯಾಗಿ ಬರುವ'ನೆಂದು ಆಶೀರ್ವದಿಸಿದುದು ಸತ್ಯವಾಯಿತು.ಭಕ್ತಾದಿಗಳು ಇವರ ಆಗಮನವನ್ನೇ ಚಾತಕ ಪಕ್ಷಿಯಂತೆ ಕಾಯ್ದಿದ್ದರು. ಮಹಾಂತಲಿಂಗರನ್ನು ಅತ್ಯಂತ ಭಯಭಕ್ತಿಯಿಂದ ಭಕ್ತಾದಿಗಳು ಬರಮಾಡಿಕೊಂಡರು. ಊರ ಹೊರಗಿನ ಅಯ್ಯನ ಗದ್ದೆಯ ಮೇಲಿನಮಠವೇ ಅವರ ಆವಾಸಸ್ಥಾನವಾಯಿತು.ಶಿವಯೋಗಿಗಳ ವೀರವಿರತಿಯನ್ನು ಕಣ್ಣಾರೆ ಕಂಡ ಭಕ್ತರು ಅವರಿಗಾಗಿ ಮತ್ತೊಂದು ಮಠವನ್ನು ಕಟ್ಟಿಸಿದರು. ಮುಂದೆ ಚಿತ್ರದುರ್ಗದ ಜಗದ್ಗುರುಗಳ ಆದೇಶದ ಮೇರೆಗೆ ಕಲ್ಮಠದ ಅಧಿಕಾರವನ್ನು ವಹಿಸಿಕೊಂಡರು. ಶ್ರೀಗಳು ಬೆಳೆ ಬೆಳೆದಂತೆ ತಮ್ಮ ಲಿಂಗಲೀಲಾವಿಲಾಸ ಮೆರೆದರು. ಸಹಜವಾಗಿ ಪವಾಡಗಳೂ ಜರುಗಿದವು. ಅವು ಅನಂತವಾಗಿವೆ: ಜನಮನದಲ್ಲಿ ಇಂದಿಗೂ ಉಳಿದಿವೆ.

೬. ಬಾಲಲೀಲಾ ಎಂಬ ಹೆಸರು ಬಂದ ಬಗೆ

ಶಿವಯೋಗಿಗಳು ಯಾವಾಗಲೂ ಮುಗ್ಧ ಮಗುವಿನಂತೆ ವೇಷ ಭೂಷಣವನ್ನು ಧರಿಸುತ್ತಿದ್ದರು. ತೊಟ್ಟಿಲಲ್ಲಿ ಮಲಗುತ್ತಿ

ದ್ದರು. ಜೋಗುಳ ಹಾಡಿರೆಂದು ಭಕ್ತರಿಗೆ ಆದೇಶವೀಯುತ್ತಿದ್ದರು. ಒಂದು ದಿನ ಮುಗ್ಧ ಮಗುವಿನಂತೆ ಕಾಡಿ ಬೇಡಿ ಆಡಿದರೆ, ಮರು ದಿನವೇ ಪ್ರಬುದ್ಧ ಜ್ಞಾನಿಯಂತೆ ತತ್ತ್ವೋಪದೇಶ ಗೈಯುತ್ತಿದ್ದರು. ನಡುನಡುವೆ ಒಮ್ಮೆಲೇ ಗಾಂಭೀರ್ಯ ಭಾವ ತಾಳಿ ಬಾಹ್ಯ ಜಗತ್ತನ್ನು ಶೂನ್ಯ ದೃಷ್ಟಿಯಿಂದ ಅವಲೋಕಿಸುತ್ತ ಮೌನದಿಂದ ಜ್ಞಾನ ಮಗ್ನರಾಗಿ ಬಿಡುತ್ತಿದ್ದರು. ಮಹಾಜ್ಞಾನಿಗಳಿಗೆ ಬಾಲ್ಯ, ಉನ್ಮತ್ತ, ಪಿಶಾಚ ಎಂಬ ಮೂರು ಅವಸ್ಥೆಗಳು ಬರುವವಂತೆ. ಮಹಾಂತ ಶಿವಯೋಗಿಗೆ ಬಂದುದು ಬಾಲ್ಯಾವಸ್ಥೆ. ಆದುದರಿಂದಲೇ ಅವರಿಗೆ ಬಾಲಲೀಲಾ ಮಹಾಂತ ಶಿವಯೋಗಿಗಳೆಂಬ ಹೆಸರು ಬಂದಿತು. ಲೀಲಾಮಾತ್ರವಾಗಿ ಜನಿಸಿ ಲೀಲಾ ಮಾತ್ರವಾಗಿ ಬೆಳೆದು ಮಹಾಂತಯೋಗಿಯಾಗಿ ಮೆರೆದು ಜಗವಂದಿತರಾದವರು. ಜಗತ್ ಪುತ್ರನಾಗಿ ಲೀಲೆಗೈದುದು ಅವರ ವ್ಯಕ್ತಿತ್ವದ ವೈಶಿಷ್ಟ್ಯವೇ ಸರಿ. 'ಕೈವಲ್ಯ ದರ್ಪಣ' ಅವರು ನಾಡು ನುಡಿಗೆ ಸಲ್ಲಿಸಿದ ಅಪ್ರತಿಮ ಸೇವೆ. ಕನ್ನಡಿಗರ ಪುಣ್ಯವಿಶೇಷದಿಂದ ಅದು ಬೆಳಕಿಗೆ ಬಂದಿದೆ. ಆ ಕೃತಿಯನ್ನು ಸವಿಯುವದೇ ಒಂದು ಸೊಗಸು.

೨. ಶ್ರೀಗಳಿಂದ ಪ್ರಭಾವಿತರಾದವರು

೧. ಮರಿದೇವರು

ಶ್ರೀ ಮಹಾಂತ ಶಿವಯೋಗಿಗಳ ಕೃಪೆಗೆ ಪಾತ್ರರಾದವರಲ್ಲಿ ಮರಿದೇವರು ಒಬ್ಬರು. ಮರಿದೇವರು ಹೆಸರಿಗೆ ತಕ್ಕಂತೆ ಮರಿದೇವರೇ ಆಗಿದ್ದರು, ಅವರ ಭಕ್ತಿ ಪಾರಮ್ಯವನ್ನು, ಲಿಂಗ

ನಿಷ್ಠೆಯನ್ನು ಕಂಡು ಮಹಾಂತ ಶಿವಯೋಗಿಗಳು 'ದೇವರಮರಿ' ಎಂದು ಸಂಬೋಧಿಸಿದರು. ಉದರ ಪೋಷಣೆಗಾಗಿ ಕೃಷಿಕರ್ಮವನ್ನು ಮಾಡುತ್ತಿದ್ದರೂ, ಮನದ ಒಲವು ಪಾರಮಾರ್ಥದ ಕಡೆಗೆ. ಮರಿದೇವರಿಗೆ ವ್ಯರ್ಥಕಾಲಹರಣ ಸೇರದು. ನಿತ್ಯ ವ್ಯವಸಾಯ ಮುಗಿದ ಕೂಡಲೇ ವಚನಗಳನ್ನು ಓದುತ್ತಿದ್ದರು. ಶಿವಶರಣರ ಪುರಾಣಗಳು ನಿತ್ಯ ಪಾರಾಯಣ ಗ್ರಂಥಗಳು. ಕಲ್ಮಠದಲ್ಲಿ ಪ್ರತಿನಿತ್ಯ ಸಂಜೆಯ ಮುಂದೆ ಶಿವಾನುಭವಗೋಷ್ಠಿ ನಡೆಯುತ್ತಿತ್ತು. ಮರಿದೇವರು ಅಲ್ಲಿಗೆ ತಪ್ಪದೇ ಹಾಜರು. ಶ್ರೀಗಳು ಮರಿದೇವರನ್ನು ಮಾತನಾಡಲು ಪ್ರೇರೇಪಿಸುತ್ತಿದ್ದರು. ಷಟ್‌ಸ್ಥಲತತ್ತ್ವವನ್ನು ಪಂಡಿತರೂ ತಲೆತೂಗುವಂತೆ ವಿವರಿಸುವ ಅದ್ಭುತ ಶಕ್ತಿಯನ್ನು ಅವರು ಪಡೆದರು. ಅವರನ್ನು ಕಂಡರೇನೇ ಭಕ್ತರ ಹೃದಯದಲ್ಲಿ ಪೂಜ್ಯಭಾವನೆ ನೆಲೆಗೊಳ್ಳುತ್ತಿತ್ತು. 'ಏನು ಓದಿದರೇನು? ಏನು ಮಾಡಿದರೇನು?' ಗುರುಸೇವೆ ಮಾಡದೆ ಮುಕ್ತಿ ದೊರೆಯದೆಂಬ ಮಾತು ಮರಿದೇವರಿಗೆ ಮನವರಿಕೆಯಾಗಿತ್ತು; ಮನದಟ್ಟಾಗಿತ್ತು. ಬಾಲಲೀಲಾ ಮಹಾಂತ ಶಿವಯೋಗಿಗಳ ಸನ್ನಿಧಿಯಲ್ಲಿ ಭಯಭಕ್ತಿಯಿಂದ ಸೇವೆ ಮಾಡುವವರಲ್ಲಿ ಅವರು ಯಾವಾಗಲೂ ಮುಂದಿದ್ದರು. ಶ್ರೀಗಳ ಕಾವ್ಯಶಕ್ತಿಯನ್ನು ಚೆನ್ನಾಗಿ ಅರಿತ ಮರಿದೇವರು ಶ್ರೀಗಳ ತತ್ತ್ವಪದಗಳನ್ನು ಸಂಗ್ರಹಿಸಿದರು. ಶ್ರೀಗಳು ಆಶು ಕವಿಗಳು. ಭಾವನಾಜೀವಿಗಳು. ಕೂತಲ್ಲಿಯೇ ಹಾಡಿಬಿಡುತ್ತಿದ್ದರು. ಮನಸ್ಸಾದರೆ ಮಠದ ಗೋಡೆಯ ಮೇಲೆ, ತೊಲೆಗಳ ಮೇಲೆ ಬರೆಯುತ್ತಿದ್ದರು. ಶಿವಯೋಗಿಗಳು ಹಾಡುವದು ಸ್ಫೂರ್ತಿ ಬಂದಾಗ. ಅದಕ್ಕೆ ಹೊತ್ತು, ಗೊತ್ತು ಇನ್ನೆಲ್ಲಿ? ಎಲ್ಲ ಸಮಯದಲ್ಲಿಯೂ ಶಿವಯೋಗಿಗಳ ಸಮೀಪದಲ್ಲಿದ್ದವರು ಮರಿದೇವರು. ಶಿವಯೋಗಿಗಳ

ಸೇವೆ ಮಾಡುವುದರ ಜೊತೆಗೆ ಸಾಹಿತ್ಯ ಸೇವೆಯನ್ನೂ ಮಾಡಿದರು. ಅವರ ಹಾಡುಗಳನ್ನು ಸಂಗ್ರಹಿಸಿದರು. ಅವರು ಆ ಕಾರ್ಯವನ್ನು ಆಗ ಮಾಡದೆ ಹೋಗಿದ್ದರೆ 'ಕೈವಲ್ಯದರ್ಪಣ'ವು ಕನ್ನಡ ದರ್ಪಣವಾಗುತ್ತಿತ್ತು. ಇದನ್ನು ನೆನೆದರೆ ಮರಿದೇವರ ಅಪೂರ್ವ ಸೇವೆಯು ಕಲ್ಪನೆ ಬರುತ್ತದೆ. ಮರಿದೇವರು ಮೈಸೂರಿಗೂ ಹೋಗಿಬಂದರು. ಮುಮ್ಮಡಿ ಕೃಷ್ಣರಾಜರ ಆದರಾತಿಥ್ಯ ಪಡೆದರು. ಅವರು ಎಲೆಯ ಮರೆಯ ಹೂವಿನಂತೆ ಇದ್ದರು.

೨. ಗಣಂಗಳಪ್ಪನವರು

ಹಸಬಿ ಗಣಂಗಳಪ್ಪನವರು. ಶ್ರೀ ಶಿವಯೋಗಿಗಳವರ ಆಶೀರ್ವಾದ ಬಲದಿಂದ ಸಮಾಜದ ಮಹಾಶಕ್ತಿಯಾಗಿ ಮೆರೆದರು. ಅವರೇನು ಅಗರ್ಭ ಶ್ರೀಮಂತರಲ್ಲ. ಆದರೆ ವ್ಯವಹಾರಕುಶಲರು; ಆಚಾರ–ವಿಚಾರ ಸಂಪನ್ನರು; ಗುರು ಲಿಂಗ ಜಂಗಮದಲ್ಲಿ ಉತ್ಕಟ ಭಕ್ತಿ. ಸಮಾಜಕಾರ್ಯದಲ್ಲಿ ಅವರೇ ಮುಂದು. ಅವರ ನಿಷ್ಕಪಟ ಹೃದಯವನ್ನರಿತ ಆಗಿನ ಸ್ವಾಮಿಗಳಾದ ಗುರುಮಹಾಂತ ಲಿಂಗದೇಶಿಕರು ಗಣಂಗಳಪ್ಪನವರನ್ನು ಸಮಾಜದ ಮುಂದಾಳೆಂದು ಘೋಷಿಸಿದ್ದರು. ಅವರು ಲಿಂಗೈಕ್ಯರಾಗುವ ಪೂರ್ವದಲ್ಲಿ ಗಣಂಗಳಪ್ಪನನ್ನೂ ಉಳಿದ ಹಿರಿಯರನ್ನೂ ಕರೆಸಿಕೊಂಡು ತಮ್ಮ ಉತ್ತರಾಧಿಕಾರಿಯಾಗಿ ತರುಣ ಶಿವಯೋಗಿಯೊಬ್ಬನು ಬರುವನೆಂದು ತಿಳಿಸಿದ್ದರು. ಅಂದಿನಿಂದ ಊರ ಭಕ್ತರು ಶಿವಯೋಗಿಗಳ ಆಗಮನವನ್ನೇ ಎದುರು ನೋಡುತ್ತಿದ್ದರು. ಶ್ರೀಗಳ ಮಾತು ಸುಳ್ಳಾಗಲಿಲ್ಲ. ಬಾಲಲೀಲಾ ಮಹಾಂತ ಶಿವಯೋಗಿಗಳು

ನಾಡನ್ನೆಲ್ಲ ಸುತ್ತುತ್ತ ಗುರುಸ್ಥಾನವಾದ ಮುಳುಗುಂದಕ್ಕೆ ಬಂದರು. ಅವರ ದಿವ್ಯತೇಜಸ್ಸನ್ನು ಕಂಡು ಗಣಂಗಳಪ್ಪನವರಿಗೆ ಅಪಾರ ಸಂತೋಷವಾಯಿತು. ಊರ ಹೊರಗಿನ ವೇಲ್ಮರವೇ ಶ್ರೀಗಳ ವಾಸವಾಯಿತು. ಬರುಹೋಗುವವರ ಸಂಖ್ಯೆ ಬೆಳೆಯಿತು. ಅದುವರಿಂದ ಊರಲ್ಲಿಯ ಕಲ್ಮಠಕ್ಕೆ ಶ್ರೀಗಳನ್ನು ಕರೆತಂದರು. ಅದರೆ ಭಕ್ತರ ಗದ್ದಲವೇ ಗದ್ದಲ. ಶಿವಯೋಗಿಗಳ ಪೂಜಾ ಪುರಸ್ಕಾರಕ್ಕೂ ಅವಕಾಶ ದೊರೆಯದಾಯಿತು. ಸೂಕ್ಷ್ಮಮತಿಯಾದ ಗಣಂಗಳಪ್ಪನವರು ತಮ್ಮ ಮನೆಯ ಹಿತ್ತಲದಲ್ಲಿಯೇ ಒಂದು ಪರ್ಣಕುಟೀರವನ್ನು ರಚಿಸಿ ಶಿವಯೋಗಿಗಳಿಗೆ ಯಾವ ತೊಂದರೆಯಾಗದಂತೆ ನೋಡಿಕೊಂಡರು. ಗಣಂಗಳಪ್ಪನವರ ಭಕ್ತಿವಿಶ್ವಾಸಕ್ಕೆ ಮೆಚ್ಚಿ ಶಿವಯೋಗಿಗಳು ತಮ್ಮ ಪಟ್ಟದ ಶಿಷ್ಯನೆಂದು ಆಶೀರ್ವದಿಸಿದರು. ಅಂದಿನಿಂದ ಗಣಂಗಳಪ್ಪನವರು ಹಿಡಿದದ್ದೆಲ್ಲ ಚಿನ್ನವಾಯಿತು. ಇವರ ಅಭಿವೃದ್ಧಿಯನ್ನು ಕಂಡು ಕೆಲ ಜನ ಕರುಬಿದರು. ಅವರ ಲಿಂಗನಿಷ್ಠೆ, ವೀರಶೈವ ಮತಾಭಿಮಾನಗಳು ಅನ್ಯಮತೀಯರನ್ನು ಕೆಣಕಿದವು. ಶಿವಯೋಗಿಗಳನ್ನು ತಿರಸ್ಕರಿಸಿ ನುಡಿಯುವದು ಕೆಲವರ ಕಾರ್ಯವಾಯಿತು. ಗಣಂಗಳಪ್ಪನವರಲ್ಲಿ ಸುಪ್ತಾವಸ್ಥೆಯಲ್ಲಿದ್ದ ಗಣಾಚಾರವೃತ್ತಿ ಸಿಡಿದೆದ್ದಿತು. ಗಣಂಗಳಪ್ಪನವರು ಬೇಡಿದವರಿಗೆ ಬೇಡಿದ್ದನ್ನು ಕೊಡುತ್ತೇವೆಂದು ಜಾಹೀರಮಾಡಿ ಅಂಗಡಿಯ ಮುಂದೆ ಬೋರ್ಡು ಹಾಕಿಬಿಟ್ಟರು. ಅಂಗಡಿ ಚಿಕ್ಕದು: ಸಾಮಾನುಗಳೂ ಅಷ್ಟಕ್ಕಷ್ಟೆ. ಬರಿದಾದ ಚೀಲಗಳಿಗೆ ಡಬ್ಬಿಗಳಿಗೆ ಮಾತ್ರ ಬರಗಾಲವಿಲ್ಲ. ನಿಂದಕರಿಗೆ ಇದೊಂದು ಅವಕಾಶ ದೊರೆಯಿತು. ಇಲ್ಲದ ಉಣ್ಣೆಯನ್ನು ತೂಕ ಮಾಡಿಕೊಟ್ಟು ಹಿರಿಮೆ

ಇವರದು. ಉಣ್ಣೆ ಬೇಡಿದವನ ಮನೆತುಂಬ ಮಕ್ಕಳು! ತಪ್ಪಾಯಿತೆಂದು ಬೇಡಿಕೊಂಡಾಗಲೇ ಮಕ್ಕಳಿಂದ ಮುಕ್ತಿ. ಶಾಸಗಾರ ಸರಕಾರವನ್ನು ಮಣಿಸಿದ ಧೀಮಂತರು ಇವರು. ಶಿವಯೋಗಿ ಇದ್ದಲ್ಲಿ ಇವರು. ಶಿವಯೋಗಿ ಮೆರೆದಲ್ಲಿ ಗಂಗಳಪ್ಪನೂ ಮೆರೆದ.

೩. ಶಿವಶರಣೆ ಬಸವಾಂಬೆ ಫಿರಂಗಿ

ಫಿರಂಗಿಯೆಂಬುದು ಮುಳಗುಂದಲ್ಲೊಂದು ಮನೆತನ; ಸಚ್ಚಾರಿತ್ರಶೀಲರಾದ ಶ್ರೀ ಶಂಕರಪ್ಪನವರು ಆಗ ಹಿರಿಯರು. ಶ್ರೀಗುರು ಮಹಂತಲಿಂಗದೇಶಿಕರ ಕೃಪೆಯಿಂದ ಸಂಸಾರದಲ್ಲಿ ಯಾವ ಕೊರತೆಯೂ ಇರಲಿಲ್ಲ. ಅವರಿಗೆ ಹತ್ತು ಮಕ್ಕಳು. ಹಿರಿಯವ ಮುರಿಗೆಪ್ಪನಾದರೆ, ಹಿರಿಯ ಮಗಳು ಬಸವಾಂಬೆ. ತಂದೆಗೆ ಅಚ್ಚುಮೆಚ್ಚಿನವಳು. ಬಸವಾಂಬೆ ರೂಪ ಗುಣಸಂಪನ್ನೆ. ದೊಡ್ಡವಳಾದೊಡನೆ ಅನುರೂಪ ವರನೊಡನೆ ಮದುವೆ ಮಾಡಿಬಿಟ್ಟರು. ನರಗುಂದ ಆಕೆಯ ಗಂಡನ ಮನೆ. ಪತಿವ್ರತೆಯಾದ ಬಸವಾಂಬೆ ಎರಡು ಮುತ್ತಿನಂತಹ ಗಂಡುಮಕ್ಕಳನ್ನು ಹಡೆದಳು. ತಾನೊಂದು ಎಣಿಸಿದರೆ ದೈವವೊಂದು ಎಣಿಸುತ್ತದೆ. ಎಳೆಯ ವಯಸ್ಸಿನಲ್ಲಿಯೇ ಗಂಡ ಮೃತ್ಯುವಿಗೆ ತುತ್ತಾದ. ಪತಿವಿಯೋಗದಿಂದ ಆಕೆ ಬಳಲಿ ಬೆಂಡಾದಳು. ಮಗಳನ್ನು ಮುಳಗುಂದಕ್ಕೆ ಕರೆದು ತಂದ ಶಂಕರಪ್ಪ. ಆತನ ಮನೆಯ ಹತ್ತಿರವೇ ಗವಿಮಠ. ಮಹಾಂತಶಿವಯೋಗಿಗಳು ಬಾಲಲೀಲಾವಿಲಾಸದ ಆಗರ. ಇದ್ದ ಇಬ್ಬರು ಮಕ್ಕಳು ಬೆಳದಿಂಗಳಲ್ಲಿ ಆಟವಾಡುವಾಗ ಹಾವು ಕಚ್ಚಿ ಸತ್ತು ಹೋಗಬೇಕೆ? ತಾಯಿಯ ದುಃಖ ಮುಗಿಲು ಮುಟ್ಟಿತು.

ಆಕೆಯ ಆರ್ತಸ್ವರ ಕೇಳಿ ಮಹಾಂತೇಶ ಹೊರಬಂದ. ತಾಯಿಗೆ ಸಮಾಧಾನ ಹೇಳಿದ ಪರಿಯಿದು: "ಸತ್ತವರ ಹಿಂದೆ ಆರು ಸಾಯುವರು ತಾಯೆ, ಅತ್ತರೆ ಸತ್ತವರು ತಿರುಗಿ ಬರುವರೇ? ನಿನಗೆ ಮಕ್ಕಳಿಲ್ಲ. ನನಗೆ ತಾಯಿಯಿಲ್ಲ." ಮಕ್ಕಳು ಸತ್ತು ನಾಲ್ಕು ದಿನಗಳಾಗಿರಲಿಲ್ಲ. ಬಸವಾಂಬೆಗ ಮೊಲೆಯಲ್ಲಿ ಹಾಲುಬಿದ್ದವು. ಬಾಲಭಾವ ಧರಿಸಿ ಶಿವಯೋಗಿ ಮೊಲೆ ಉಣತೊಡಗಿದ. ಅವಳು ಶಿವಯೋಗಿ ಶಿಶುವಿಗೆ ಹಾಲುಣಿಸಿ ಧನ್ಯಳಾದಳು. ಜಗತ್ಪುತ್ರನ ತಾಯಿಯಾಗಿ ಮೆರೆದಳು. ತೂಗಿದಳೋ ಆ ತಾಯಿ ಜಗದೋದ್ಧಾರನಾ! ಮೈಸೂರಿನ ಮುಮ್ಮಡಿ ಕೃಷ್ಣರಾಜನ ರೋಗವನ್ನು ಶಿವಯೋಗಿಗಳು ಹೋಗಲಾಡಿಸಿದ್ದರು. ಅದಕ್ಕಾಗಿ ಶಿವಯೋಗಿಗಳನ್ನು ಅರಮನೆಗೆ ಬರಮಾಡಿಕೊಳ್ಳಲು ಅರಸು ತವಕಗೊಂಡಿದ್ದ. ವೆಂಕಟರಾಯನೆಂಬ ತಮ್ಮ ರಾಯಭಾರಿಯನ್ನು ಮುಳಗುಂದಕ್ಕೆ ಅಟ್ಟಿದ. 'ನಾಳೆ ನೋಡೋಣ' ಎಂದು ಶಿವಯೋಗಿಗಳ ಉತ್ತರ. ಪ್ರತಿ ದಿವಸ ಕೇಳಿದರೂ ಇದೇ ಉತ್ತರ. ನಾಳೆಗ ಕೊನೆಯುಂಟೆ? ತಿಂಗಳೆರಡು ಕಳೆದವು. ಈ ಪೇಚಾಟವನ್ನು ಕಂಡು ಕೊನೆಗೆ ಬಸಮ್ಮನು ತನ್ನ ಮಗನಿಗೆ ಸಿಟ್ಟು ಮಾಡಿದಳು.

"ಬೇಕಾದರೆ ಹೋಗಬೇಕು. ಸಾಕಾದರೆ ಬಿಡಬೇಕು. ನಾಳೆ ಎಂದರೇನು? ನಿನ್ನ ಹುಚ್ಚುತನ" ಎಂದಳು. ಶಿವಯೋಗಿ ರಾಜನಿಗೆ ಮನ್ನಣೆ ಕೊಡಲಿಲ್ಲ; ಜಗದ್ಗುರುಗಳ ಆಜ್ಞೆಗೂ ಮಣಿಯಲಿಲ್ಲ. ಆದರೆ ತಾಯಿ ಸಿಟ್ಟು ಮಾಡಿ ಹೇಳಿದರೆ ಒಲ್ಲೆನ್ನಲಿಲ್ಲ. ಮಹಾತಾಯಿಯನ್ನು ಕರೆದುಕೊಂಡೇ ಮೈಸೂರಿಗೆ ದಯಮಾಡಿಸಿದರು. ಶ್ರೀ ಶಿವಯೋಗಿಗಳ ಪರಿವಾರವನ್ನು ಭಕ್ತಿಯಿಂದ ಕಂಡು ವರ್ತನಾ

ಆಶೀರ್ವಾದ ಪಡೆದ ಅರಸು ಬಲ್ಲವರಿಂದ ಇವರೆಲ್ಲರ ಭಾವಚಿತ್ರಗಳನ್ನು ಬರೆಯಿಸಿದನು. ಬಸಮ್ಮನಿಗೆ ಬೇಡೆಂದರೂ ಬೆಲೆಯುಳ್ಳ ಪೀತಾಂಬರ ಬಂತು: ಮುಳಗುಂದಕ್ಕೆ ಬಂದಮೇಲೆ ಪೀತಾಂಬರವನ್ನು ಮಾರಿ ಬಂದ ಹಣದಿಂದ ಗವಿಯ ಮಗ್ಗಲಿಗೆ ಅರಂಕಣದ ಗುರುಮಠವನ್ನು ಕಟ್ಟಿಸಿದಳು. ಬಸಮ್ಮ ಶಿವಯೋಗಿಯ ಸೇವೆಗೆ ಬೇಸರಿಯಲಿಲ್ಲ; ಶಿವಯೋಗಿಯ ಕಾಟಕ್ಕೆ ಮುನಿಯಲಿಲ್ಲ. ಮಹಾಶರಣೆ ಬಸಮ್ಮ ಲಿಂಗಪೂಜೆ ಮಾಡುತ್ತಲೇ ಶಕೆ ೧೭೭೨ರಲ್ಲಿ ಲಿಂಗದಲ್ಲಿ ಒಂದಾದಳು. ಆಗ ಶ್ರೀ ಶಿವಯೋಗಿಗಳು ತಬ್ಬಲಿಯಾಗಿ ಲೌಕಿಕರಂತೆ ಕಣ್ಣೀರಿಟ್ಟರು; ಕಣ್ಣೀರೇ ಕಾವ್ಯರಸ ಗಂಗೆಯಾಗಿ ಹೀಗೆ ಹರಿದಿದೆ:

ಪರಿಪರಿಯ ಕಾಡಿದೆನು ಪರಿಪರಿಯ ಬೇಡಿದೆನು
ಪರಿಪರಿಯ ಪಣ್‌ಫಲಮಿಠಾಯಿಗಳಕೆಡಿಸಿದೆನು
ಪರಿ ಪರಿಯ ವಸ್ತ್ರಗಳ ಹರಿಹರಿದು ಹಾಕಿದೆನು
ಈಪರಿಯ ಕಾಡಿಸಿಕೊಂಡೆ ।

ಪರಿಪರಿಯ ಕಬ್ಬು ಫಲಬೆಳೆಸಿದಗೆ ಸುಖವಿಲ್ಲ
ಪರಿಪರಿಯ ಕಬ್ಬು ಫಲಗಳಿಗೇನು ಸುಖವುಂಟು
ಶರಣು ಬಸವಾಂಬಿಕೆಯೆ ನಿನ್ನ ಸದ್ಗತಿಗೆನ್ನ
ಪಡಕೊಂಡು ನಡುವೆಬಿಟ್ಟೆ

ಶಿವಯೋಗಿಗಳಿಂದ 'ಶರಣು' ಎನಿಸಿಕೊಂಡ ಬಸಮ್ಮ ಮಹಾಶರಣೆಯಲ್ಲದೆ ಮತ್ತೇನು! ಬಸಮ್ಮನ ಸಮಾಧಿಯನ್ನು ಶ್ರೀಗುರು ಮಹಾಂತಲಿಂಗದೇಶಿಕರ ಗದ್ದುಗೆಯ ಎದುರಿನಲ್ಲಿಯೇ ಇದೆ. ಆಕೆಯ ಗದ್ದುಗೆಗೆ ನಿತ್ಯ ಪೂಜೆ ಇಂದಿಗೂ ನಡೆಯುತ್ತಿದೆ.

ಶಿವಯೋಗಿಗಳಿಗೂ ಮೈಸೂರ ಅರಸರು ಬೇಕಾದಷ್ಟು ಧನ ಕನಕ ನೀಡಿದರೂ, ಏನನ್ನೂ ಮುಟ್ಟದೆ ಒಂದು ಕುಂಬಳಸೊರಟೆ ಯನ್ನು ಮಾತ್ರ ಸ್ವೀಕರಿಸಿದರು. ಆ ಸುಂದರ ಚಿತ್ರಮಯ ಕುಂಬಳ ಸೊರಟೆಯನ್ನು ಇಂದಿಗೂ ಮುಳುಗುಂದ ಮಠದಲ್ಲಿ ನೋಡ ಬಹುದು. ಇವರೆಲ್ಲರೂ ಮರೆಯಲಾಗದ ಮಹಾನುಭಾವರು. ಐತಿ ಹಾಸಿಕ ಧಾರ್ಮಿಕ ಪುರುಷರು. ಶಿವಯೋಗಿಗಳ ಒಡನಾಡಿಯಾಗಿ ಬೆಳೆದವರು. ಜನಮಾನಸದಲ್ಲಿ ಚಿರಂತನವಾಗಿ ಬೆಳಗುತ್ತಿದ್ದಾರೆ.

೮. ಲಿಂಗದಲ್ಲಿ ಒಂದಾದರು

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಬಾಳಿ ದುದು ಕೇವಲ ೩೬ ವರುಷಗಳು ಮಾತ್ರ. ಇಷ್ಟು ಚಿಕ್ಕವಯಸ್ಸಿನ ಲ್ಲಿಯೇ ತಮ್ಮ ಧೀಶಕ್ತಿಯಿಂದ ಅಪಾರ ಅನುಭವವನ್ನು ಅಳವಡಿಸಿ ಕೊಂಡು ಕೀರ್ತಿಶೇಷರಾದರು. ಶ್ರೀಗಳು ಶಿವಯೋಗದಲ್ಲಿ ಬಲ್ಲಿ ದರೂ, ಮಹಾ ವೈರಾಗ್ಯಶೀಲರೂ, ಶಿವಭಕ್ತಿಪರಾಯಣರೂ ಆಗಿದ್ದರು. ಶ್ರೀ ಶಿವಯೋಗಿಗಳ ಜೀವನವು ಹೂವಿನ ಹಾಸಿಗೆ ಯಾಗಿರಲಿಲ್ಲ. ಅವರಿಗೂ ಅನೇಕ ಪರೀಕ್ಷಾ ಕಾಲಗಳು ಒದಗಿದವು. ಕೆಲವರು ಶ್ರೀಗಳ ಶಕ್ತಿಯನ್ನು ಕಂಡು ಕುಣಿದಾಡಿದರೆ. ಉಳಿದವರು ಇಲ್ಲದ ಕೀಟಲೆಗಳನ್ನು ಕೊಟ್ಟರು. ಪರಮತೀಯರ ಕಣ್ಣಂತೂ ಅವರ ಮೇಲೆ ಸದಾ ಇತ್ತು. ಸ್ವಮತೀಯರು ಪರರ ಬೆನ್ನು ಕಟ್ಟಿ ಮಚ್ಚರಂತೆ ಕುಣಿದು ಕುಪ್ಪಳಿಸಿದರು. ಶಿವಯೋಗಲೀಲೆಯಲ್ಲಿ ನಿರತರಾದ ಶ್ರೀಗಳು ಬುದ್ಧಿವಾದ ಹೇಳಿನೋಡಿದರು. ಕೇಳದವರ ಮಂದಮತಿಯನ್ನು ಕಂಡು ನಕ್ಕರು. ಮೇಲಾಗಿ ಮಠದ ಪರಮ ಶಿಷ್ಯ ಪಸಬಿ ಗಣಂಗಳಪ್ಪನವರ ಛಲದ ಪರಿಣಾಮವಾಗಿ ತಾಸ

ಗಾಂವ ಸರಕಾರವೂ ಶ್ರೀಗಳ ಮೇಲೆ ಕೆಂಡ ಕಾರಿತು. ಅವರನ್ನು ಕೋರ್ಟಿಗೆಳೆದು ಮೋಜು ಮಾಡಬಯಸಿತು. ಯಾವುದೂ ಶ್ರೀಗಳಿಗೆ ತೊಂದರೆ ಎನಿಸಲಿಲ್ಲ. ತೊಂದರೆ ತಂದೊಡ್ಡಿದವರೇ ತೊಂದರೆಗೊಳಗಾದರು. ಪ್ರಾಪಂಚಿಕ ಸುಖ ದುಃಖಗಳನ್ನು ಮೀರಿ ನಿಂತ ಶಿವಯೋಗಿಗೆ ಯಾವುದು ಸುಖ? ಯಾವುದು ದುಃಖ? 'ಲೋಕಕ್ಕೆ ತಾಂ ಮರುಳ್ ತನಗೆ ಲೋಕಂ ಮರುಳ್' ಎಂಬಂತೆ ಶಿವಯೋಗಿಗಳು ಈ ಲೋಕದಲ್ಲಿ ಇದ್ದೂ ಇಲ್ಲದಂತಿದ್ದರು. 'ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ. ಲಿಂಗವೆಂಬ ಎಲೆಯಾಯಿತ್ತು. ಮೇಲೆ ವಿಚಾರವೆಂಬ ಹೂವಾಯಿತ್ತು; ಆಚಾರವೆಂಬ ಕಾಯಾಯಿತ್ತು; ನಿಷ್ಪತ್ತಿಯೆಂಬ ಹಣ್ಣಾಯಿತ್ತು. ನಿಷ್ಪತ್ತಿಯೆಂಬಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದೆತ್ತಿಕೊಂಡ' ಎಂಬ ಅಣ್ಣನವರ ವಚನದಂತೆ ಶ್ರೀಗಳು ಕ್ರಿ. ಶ. ೧೮೫೮ರಲ್ಲಿ (ಶಾ. ಶ. ೧೭೮೦ನೆಯ ಸಿದ್ಧಾರ್ಥ ಸಂವತ್ಸರ ಮಾಘಶುದ್ಧ ೧೩ ಸೋಮವಾರ ಪ್ರಾತಃಕಾಲ) ಲಿಂಗದಲ್ಲಿ ಒಂದಾದರು; ಅವರ ಭೌತಿಕ ದೇಹಮಿಂಚಿ ಮಾಯವಾದರೂ ಅವರ ನಿತಾಂತ ಭಕ್ತಿಯ ದಿವ್ಯ ಸಾಧನೆಯ ಕೈದೀವಿಗೆ ಇಂದಿಗೂ ಮಾನವ ಕುಲ ಪಾವನ ಮಾಡುತ್ತಿದೆ!

೯. ಕೈವಲ್ಯದರ್ಪಣ

ಕನ್ನಡ ಸಾಹಿತ್ಯವು ಅಪಾರವಾಗಿರುವಂತೆ ಆಳವೂ ವೈವಿಧ್ಯಮಯವೂ ವೈಶಿಷ್ಟ್ಯಪೂರ್ಣವೂ ಆಗಿದೆ. ಒಂದೆಡೆ ಪಂಡಿತರಿಗೆ ರುಚಿಸುವಂತಹ ಚಂಪೂ ಸಾಹಿತ್ಯ, ಇನ್ನೊಂದೆಡೆ ಜನಸಾಮಾನ್ಯರಿಗೆ ಹಿಡಿಸುವಂತಹ ಕೇವಲ ಸ್ಫೂರ್ತಿಯಿಂದ ಹೊರ

ಹೊಮ್ಮಿದ ಜನಪದ ಸಾಹಿತ್ಯ, ಹೇರಳವಾಗಿ ಸಿಕ್ಕುತ್ತದೆ. ಇವೆರಡರ ನಡುವೆ ಪದ, ಹಾಡುಗಬ್ಬಗಳು ವಿವಿಧ ರಾಗಾನ್ವಿತ ನೀತಿಬೋಧಕ ತತ್ತ್ವಪದಗಳು ಜನರ ಬಾಯಲ್ಲಿ ನಲಿಯುಯುತ್ತಿವೆ; ಆನಂದದ ತೆರೆಗಳನ್ನು ಹರಡುತ್ತಿವೆ. ಒಟ್ಟಿನಲ್ಲಿ ವೀರಶೈವ ಕೈವಲ್ಯ ಸಾಹಿತ್ಯದ ಇತಿಹಾಸ ಉಜ್ವಲವಾಗಿದೆ.

ಕೈವಲ್ಯವೆಂದರೆ ಮೋಕ್ಷ; ಶಿವ ಜೀವೈಕ್ಯ; ಲಿಂಗಾಂಗ ಸಾಮರಸ್ಯ. ಅದನ್ನು ಸಾಧಿಸುವ ಮಾರ್ಗ ಕೈವಲ್ಯಪದ್ಧತಿ. ಶಿವಜೀವೈಕ್ಯ ಇಲ್ಲವೆ ಲಿಂಗಾಂಗ ಸಾಮರಸ್ಯರೂಪವಾದ 'ಶಿವಯೋಗ'ದ ರಹಸ್ಯವನ್ನು ವಿವರಿಸುವ ಗ್ರಂಥಕ್ಕೆ 'ಕೈವಲ್ಯ ಪದ್ಧತಿ' ಎಂದು ಹೆಸರು.[೧] ವಚನ ಸಾಹಿತ್ಯದ ಮೂಲಕ ಶಿವಶರಣ–ಶರಣೆಯರು ನಾಡು ನುಡಿಯ ಮೇಲೆ ಎಂಥ ಸತ್ಪರಿಣಾಮವನ್ನು ಉಂಟು ಮಾಡಿದರೋ, ಕೈವಲ್ಯಕಾರರೂ ಸಹ ಮತ್ತೊಂದು ಬಗೆಯಲ್ಲಿ ಇನ್ನೂ ಸುಲಭವಾಗಿ ಸರಸವಾಗಿ ತಮ್ಮ ತತ್ತ್ವಪದಗಳ ಮುಖಾಂತರ ಮಾಡಿದ್ದಾರೆ. ಬಸವಾದಿ ಪ್ರಮಥರ ಕಾಲದಿಂದಲೂ ವಚನಗಳನ್ನು ಹಾಡುವ ಸಾಂಪ್ರದಾಯ ರೂಢಿಯಲ್ಲಿತ್ತು. ಇದು ಐತಿಹಾಸಿಕ ಸತ್ಯವಾದ ಮಾತು. ಬಸವಾದಿ ಪ್ರಮಥರ ಸ್ವರವಚನಗಳು ಧಾರಾಳವಾಗಿ ದೊರೆಯುತ್ತಿವೆ. ಈ ಬಗೆಗೆ ಕೆಲವು ಆಧಾರಗಳಿವು:

(೧) 'ಕೂಡಲ ಸಂಗಮದೇವಾ ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ' (ಬಸವಣ್ಣ)

(೨) 'ಎರಡೆಂಬತ್ತು ಕೋಟಿ ವಚನವ ಹಾಡಿ' (ಪ್ರಭುದೇವ)

---

೧. ಪಾರಮಾರ್ಥ ಪ್ರಕಾಶಿಕೆ ಸಂ. ಉಮಾಪತಿಶಾಸ್ತ್ರಿ ಪು ೩

(೩) 'ಅರವತ್ತೆಂಟು ಕೋಟಿ ವಚನವ ಹಾಡಿ ಹಾಡಿ
ಸೋತಿತೆನ್ನ ಮನ ನೋಡಯ್ಯ' (ಸಿದ್ಧರಾಮ).

ವಚನಕಾರರು ತಮ್ಮ ಅಂದಂದಿನ ಲೋಕಾನುಭವವನ್ನು ಶಿವಾನುಭವವಾಗಿ ಪರಿವರ್ತಿಸಿ ವಚನಗಳ ಮೂಲಕ ಅಭಿವ್ಯಕ್ತಿ ನೀಡಿದ್ದಾರೆ. ಶಿವಯೋಗಾನಂದದ ನಿಟ್ಟೆರಗಿನಲ್ಲಿ ಬರತಕ್ಕ ಶಬ್ದಗಳು ಗೀತಯುಕ್ತವಾಗಿರುವವರಲ್ಲಿ ಸಂದೇಹವಿಲ್ಲ. ಡಾ. ಎಲ್. ಬಸವರಾಜು ಅವರು 'ಶಿವದಾಸ ಗೀತಾಂಜಲಿ' ಎಂಬ ಮಹತ್ವದ ಕೃತಿಯಲ್ಲಿ ಈ ಬಗೆಗೆ ವಿಶೇಷ ವಿವೇಚನೆ ಮಾಡಿರುವುದು ಗಮನಾರ್ಹ. "ಶಿವತತ್ತ್ವ ಗೀತವ ಪಾಡುವದು," "ಅಯ್ಯಾ ನೀ ಕೇಳಿದರೆ ಕೇಳು. ಕೇಳದಿದ್ದಡೆ ಮಾಣು ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ" ಮೊದಲಾದ ಮುತ್ತಿನಂತಹ ಮಾತುಗಳನ್ನು ಇಲ್ಲಿ ಗಮನಿಸಬೇಕು. ಮುಕ್ತ ಛಂದಸ್ಸಿನ ಮೂಲ ರೂಪವಾದ ಈ ವಚನಗಳ ಬಂಧ ಹಾಡಲು ಅನುಕೂಲವಾಗಿದೆ. ಆದರೆ ರಾಗ–ತಾಳ–ಲಯಗಳ ಪರಿಜ್ಞಾನದೊಂದಿಗೆ ತಮ್ಮ ಅನುಭವದ ಪರಿಪಾಕವನ್ನು ಹಾಡಿನ ಪದ್ಧತಿಯಲ್ಲಿ ಕೈವಲ್ಯಕಾರರು ನೀಡಿರುತ್ತಾರೆ. ಇವರ ತತ್ತ್ವ ಪದಗಳು ಸಾಹಿತ್ಯ, ಸಂಗೀತ, ಅನುಭಾವಗಳ ಶ್ರೀಮಂತಿಕೆ ಧೀಮಂತಿಕೆಗಳಿಂದ ಜ್ಯೋತಿರ್ಮಯವಾಗಿವೆ. ಕೈವಲ್ಯ ಸಾಹಿತ್ಯ ಮಹಾಂತರ ನಿಜದರಿವು ಆಚರಣೆಯಿಂದ ಹೊಮ್ಮಿಬಂದ ಅನುಭಾವದ ಸುಂದರ ಅಭಿವ್ಯಕ್ತಿಯೇ ಸರಿ. ಕೈವಲ್ಯ ಸಾಹಿತ್ಯಪರಂಪರೆಯ ಸೌಂದರ್ಯ, ಮಾಧುರ್ಯ,ಗಾಂಭೀರ್ಯಗಳನ್ನು ಆಧ್ಯಾತ್ಮಿಕ ಜೀವನದ ಮೌಲ್ಯಗಳನ್ನು ಆಯಾ ಅನುಭಾವಿಗಳ ಈ ಮಂಜುಳ ಲಹರಿಗಳಿಂದಲೇ ಮನಗಾಣಬಹುದು. ಕೈವಲ್ಯಕಾರರ ಜೀವನ ದೃಷ್ಟಿ, ತತ್ತ್ವ ಜಿಜ್ಞಾಸೆ,

ದರ್ಶನಾನುಭವ ಇತ್ಯಾದಿಗಳನ್ನು ಈ ತತ್ತ್ವ ಸಾಹಿತ್ಯದ ವಿಹಂಗಮ ಅವಲೋಕನದ ಮೂಲಕ ಸಹೃದಯರು ತಿಳಿಯಬಹುದಾಗಿದೆ. ಬಸವಾದಿ ಪ್ರಮಥರ ಜೀವನದ ಪರಮಾದರ್ಶಗಳನ್ನು ಕೈವಲ್ಯ ಕಾರರು ಜೀವಿಸಿ ಅನುಭಾವ ಪದಗಳ ಮೂಲಕ ಅದನ್ನು ಕನ್ನಡಿ ಗರಿಗಿತ್ತಿದ್ದಾರೆ. ವಚನಕಾರರ ಸಂದೇಶವಾದ ಜ್ಞಾನ-ಕ್ರಿಯೆಗಳ ಸಮಸಮುಚ್ಚಯ ಸಾಮರಸ್ಯವನ್ನು ಅವರು ಸಾಧಿಸಿದ್ದಾರೆ. ಜ್ಞಾನ ದಿಂದ ಬದುಕಿಗೆ ಸ್ಫೂರ್ತಿಯ ಜ್ಯೋತಿ ಉಂಟಾದರೆ, ಕ್ರಿಯೆಯಿಂದ ದೈವೀಭಕ್ತಿ ಲಭಿಸುವದು.

ವಚನದಲ್ಲಿ ಕುಡಿಯೊಡೆದು, ತ್ರಿಪದಿಯಲ್ಲಿ ಮಿಡಿಯಾಗಿ ಷಟ್ಪದಿ-ಸಾಂಗತ್ಯಗಳಲ್ಲಿ ಪಾಡಾಗಿ ಹಾಡುಗಳಲ್ಲಿ ಹಣ್ಣಾಗಿದೆ: ಶರಣರ ಗೀತ ಸಂಪ್ರದಾಯ. ನಿಜಗುಣ ಶಿವಯೋಗಿಗಳು ನಿಜಾನಂದದಲ್ಲಿ ಹರಿಸಿದ ರಾಗ ರಸತರಂಗಿಣಿ ಅನೇಕ ಶಾಖೋಪ ಶಾಖೆಗಳ ಮೂಲಕ ಹೊನಲಾಗಿ ಹರಿದುದು ಕನ್ನಡ ಸಾಹಿತ್ಯ ದಲ್ಲಿಯೇ ಗಮನಾರ್ಹ ಸಂಗತಿ. ಈ ಹಾಡುಗಬ್ಬಗಳಿಗೆ ಪ್ರಾರಂಭ ದಲ್ಲಿಯೇ ಅಪೂರ್ವ ಪ್ರತಿಭೆಯ ಅಸಾಧಾರಣ ವ್ಯಕ್ತಿತ್ವ ಪಡೆದ ಶ್ರೀ ನಿಜಗುಣ ಶಿವಯೋಗಿಗಳಿಂದ ದೀಕ್ಷೆ ದೊರೆತುದು ಕೈವಲ್ಯ ಸಾಹಿತ್ಯದ ಸೌಭಾಗ್ಯ. ನಿಜಗುಣರ 'ಕೈವಲ್ಯಪದ್ಧತಿ' ಕೈವಲ್ಯಾನು ಭವದ ಕಲ್ಪವೃಕ್ಷ. ಸರ್ಪಭೂಷಣರ ಹಾಡುಗಳು ಅದಕ್ಕೆ ಹಬ್ಬಿದ ಸುಂದರ ಬಳ್ಳಿ. ಆದ್ದರಿಂದಲೇ ಅವರು ತಮ್ಮ ಕೃತಿಯನ್ನು 'ಕೈವಲ್ಯ ಕಲ್ಪವಲ್ಲರಿ' ಎಂದು ಕರೆದಿರುವುದು ಸಮುಚಿತವಾಗಿದೆ. 'ಆ ಕಲ್ಪ ವೃಕ್ಷ ಏರಬಲ್ಲವರಿಗೆ ಮಾತ್ರ ಅದು ಫಲವನ್ನಿತ್ತರೆ, ಈ ಕಲ್ಪವಲ್ಲರಿ ತಾನೇ ಬಾಗಿಬಂದು ಸಾಧಕನ ಕೈ ಹಿಡಿದು ಕರಣಾಳುವಿನಂತೆ ಮುನ್ನ

ಡಿಸುತ್ತವೆ; ಮೇಲೆತ್ತುತ್ತವೆ. ಇದಕ್ಕೆ ಕನ್ನಡಿ ಹಿಡಿದವರು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು.

ಮಹಾಂತ ಶಿವಯೋಗಿಗಳು ಶಿವಯೋಗಾನಂದ ಭರಿತರಾಗಿ ಸಹಜವಾಗಿ ಹಾಡಿಕೊಂಡ ಪದಗಳ ಸಂಗ್ರಹವೇ ಕೈವಲ್ಯದರ್ಪಣ. ಅದೊಂದು ಅನುಭವದ ಅಮೃತಕುಂಭ; ಅಕ್ಷಯಪಾತ್ರೆ. ಮಹಾಂತ ಶಿವಯೋಗಿಗಳ ಆತ್ಮಗೀತಾಂಜಲಿ; ಅನುಭಾವದ ಮಿಂಚಿನ ಗೊಂಚಲು. ಕೈವಲ್ಯಸಾಹಿತ್ಯ ಪ್ರಪಂಚದಲ್ಲಿ ತನ್ನದೆ ಆದ ವಿಶಿಷ್ಟಸ್ಥಾನವನ್ನುಪಡೆದು ಚಿರಂತನ ಬೆಳಗುವ ಅಪರೂಪ ಕೃತಿ. ಅದರಲ್ಲಿ ವಿವಿಧ ತಾಳ-ರಾಗಗಳಿಂದ ಕೂಡಿದ ಭಕ್ತಿ, ಜ್ಞಾನ, ನೀತಿ, ವೈರಾಗ್ಯಭರಿತವಾದ ೧೬೨ ಹಾಡುಗಳಿವೆ. ಪ್ರತಿಯೊಂದು ಪದ್ಯವು ಮಹಾಂತಲಿಂಗ ಮಹಾಂತೇಶ ಎಂಬ ಅಂಕಿತದಿಂದ ಮುಕ್ತಾಯ ಗೊಂಡಿದೆ. ಒಂದೊಂದು ಹಾಡು ಶಿವಯೋಗಿಗಳ ಲೋಕಾನುಭವ-ಶಿವಾನುಭವಗಳ ಪೂರ್ಣ ಪ್ರತ್ಯಕ್ಷಿ. ಮಾನವನು ನಿತ್ಯ ನಿಜ ಸುಖವನ್ನು ಪಡೆಯುವ ಬಗೆಯನ್ನು ಈ ಪದ್ಯಗಳು ಮನೋಜ್ಞವಾಗಿ ನಿರೂಪಿಸುತ್ತವೆ.

'ವನಗಿಳಿಯು ಬಂದೆನ್ನ। ಮನಗಿಳಿಯ ಬುದ್ಧಿಯನು।
ವಿನಯದಿಂ ಕಿಡಿಸಿ ಪೋಗಲು ಬಂದೆಯಾ ॥ಪ॥

ಶಿವಶಿವವೆಂಬುದ ಮರೆಸಿ। ಚಿವಚಿವವೆಂಬುದುಕಲಿಸಿ।
ಭವಿಕಾಲಮಾರ್ಜಾಲನುಣಿಸ ಬಂದೆಯಾ॥
ಪವನವರ್ಣದ ಗಿಳಿಯೆ । ಧವಳವರ್ಣದ ಗಿಳಿಯೆ।
ಭವವೃಕ್ಷಕೆನ್ನ ಹಾರ ಕಲಿಸಬಂದೆಯಾ ॥೧॥

ಪರಧ್ಯಾನವೆಂಬ ಮಾಹಾ। ವರಪಂಜರದ ಗಿಳಿಯು।
ಮರಪಂಜರದೊಳಗಾಡ ಕಲಿಸಬಂದೆಯಾ॥

ಮರಗಿಳಿಯೆ ಹೋಗಿನ್ನು। ಅರಸ ಗಿಳಿ ಬುದ್ಧಿಬಲು।
ಬಿರುಸಾಯ್ತು ನಿನ್ನ ಕೂಡಾಡಿ ನಮ್ಮ ॥೨॥

ಗುರುಮಹಾಂತಲಿಂಗ ತಾ। ನಿರದೆ ಸಾಕಿದಗಿಳಿಯು।
ಸರಿಯೆ ನಿನ್ನೊಡನೆ ಕೂಡಾಡಲಿಕ್ಕೆ॥

ಮರಿದೇವರೆ ಇದನೊಯ್ದು। ಮರದೊಳಗೆ ಬಿಟ್ಟು ಬಾ।
ತರವಲ್ಲ ಗಿಳಿಬುದ್ಧಿ ಹೊಯ್ತು ನಮ್ಮ॥೧

ಮೇಲಣ ರೂಪಕ ಅದೆಷ್ಟು ಸುಂದರವಾಗಿದೆ! ಬಂಧುರವಾಗಿದೆ!! ಸಂಸ್ಕಾರ–ಸದ್ವರ್ತನೆಯಿಲ್ಲದ ಸ್ವೇಚ್ಛಾಚಾರದ ಸ್ವಚ್ಛಂದ ಚಕ್ಕಂದವಾಡುವ ವನಗಿಳಿಯು ಮನೆಗಿಳಿಯ ಸಂಯಮ–ಸದಾಚಾರ, ಸದ್ಬುದ್ಧಿಗಳನ್ನು ನಾಶಮಾಡಿತು. ಇದು ದುಸ್ಸಂಗದ ಸಹಜ ಪರಿಣಾಮ. ಇದು ಕಟುಕರಗಿಳಿ. ಮಠದ ಗಿಳಿಯ ಕತೆಯನ್ನು ನೆನಪಿಗೆ ತರುತ್ತದೆ. ಆತ್ಮ ಚೈತನ್ಯವಿಲ್ಲದ ಅಪಕ್ವ ಮನವು ಬಹಿರ್ಮುಖವಾದರೆ ಆಗುವ ಅನಾಹುತವನ್ನು ಅದೆಷ್ಟು ಮಾರ್ಮಿಕವಾಗಿ ಈ ರೂಪಕದಲ್ಲಿ ಬಿಂಬಿಸಿದ್ದಾರೆ. ಪ್ರಪಂಚದಲ್ಲಿದ್ದರೂ ಪಾರಮಾರ್ಥ ಸಾಧಿಸುವ ಸಾಧಕನಿಗೆ ಈ ಶಿವಮಂತ್ರ ದಿನ ದಿನವೂ ನೆನಪಿಗೆ ತಂದುಕೊಳ್ಳುವಂತಹದಾಗಿದೆ. ಶಿವಯೋಗಿಗಳು ಹೇಳುವ ಪರಿ ಮನೋಹರವೆಂಬುವಕ್ಕೆ ಇದೊಂದು ಉತ್ಕೃಷ್ಟ ಉದಾಹರಣೆ.

---

೧. ಕೈವಲ್ಯದರ್ಪಣ–ಶಿ. ಶಿ. ಬಸವನಾಳ ಪು: ೫೪

ಅವರವರ ಭಕ್ತಿಗೆ ಅವರವರ ಭಾವಕ್ಕೆ
ಅವರವರ ತೆರನಾಗಿ ಇರುತಿಹನು ಶಿವಯೋಗಿ ||೫||

ಇರದೊಂದು ಕನ್ನಡಿಯ ನೂರಾರು ಜನ ಹಿಡಿಯೆ।
ಸರಳಾಗಿ ಅವರವರ ರೂಪು ಕಾಣುವಂತೆ॥
ಹರಿಯ ಭಕ್ತರಿಗೆ ಹರಿ ಹರನ ಭಕ್ತರಿಗೆ ಹರ॥
ನರರೇನು ಭಾವಿಸುವರದರಂತೆ ತೋರುವನು ||೧||

ಮತಭೇದದವರು ದುರ್ಮತಿಯಿಂದ ಯತಿವರಗೆ।
ಸ್ತುತಿ ನಿಂದೆ ಮಾಡಿದರೆ ಅವರಿಗೆ ತಿರುಗುವುವು॥
ಯತಿವರನು ತಾ ತನ್ನ ಪಥದಲ್ಲಿಯಿರುವನು।
ಕ್ಷಿತಿಯ ಜನರ ಪಾಪ ಪುಣ್ಯ ಫಲಪರೀಕ್ಷೆ ||೨||

ಕುಲಛಲವ ಹಿಡಿದಿರುವ ಕಲಕುಮನದವರಲ್ಲಿ।
ತಿಳಿವಳಿಕೆ ಶಿವಚಂದ್ರಮ ಕಾಣುವ ಪರಿಯೆಂತು॥
ಕುಲಛಲವನತಿಗಳೆದ ತಿಳಿಯ ಮನದವರಲ್ಲಿ।
ಸಲೆ ಮಹಂತಲಿಂಗ ಚಿತ್ಸೂರ್ಯ ಕಾಣುವನು[೧] ||೩||

ವಿಶ್ವಸಂಸ್ಕೃತಿಯ ಸಾಕಾರವೇ ಈ ಹಾಡು. ಸರ್ವ ಧರ್ಮ ಸಮನ್ವಯದ ಸಮುಚಿತ ಭಾವಪೂರ್ಣ ವಿಚಾರಗಳು ಈ ಹಾಡಿನಲ್ಲಿ ಕೆನೆಗಟ್ಟಿವೆ. ಶ್ರೀಗಳ ಉದಾರ ಉದಾತ್ತ ಮನೋಭಾವನೆಗಳು ಸುಂದರವಾಗಿ ಹೊರಹೊಮ್ಮಿವೆ. ಸಾರ್ವಕಾಲಿಕ ಸತ್ಯ

---

೧. ಕೈ. ದ. ಪು: ೮೫; ೮೬

ಸತ್ಯವನ್ನು ಸಾರುವ ಈ ಹಾಡು ಕನ್ನಡಿಗರ ಹೃದಯ ಕಮಲದಲ್ಲಿ ಅಜ್ಯೋತ್ರಿ ಮೂಡಿ ನಿಲ್ಲಬೇಕಾಗಿದೆ. ಇಂದಿನ ವಿಷಮಯ ಜಾತೀಯ ಕೋಲಾಹಲಕ್ಕೆ ತಕ್ಕ ಅಂಜನ ಈ ಹಾಡು. ಧರ್ಮದ ಎತ್ತರವಾದ ವೇದಿಕೆಯ ಮೇಲೆ ನಿಂತು ಇಡೀ ಮಾನವಕುಲವನ್ನು ಒಟ್ಟಾಗಿ ನೋಡುವ ಅವರ ನಿಲುವಿನಲ್ಲಿ ದಾರ್ಶನಿಕತೆ ಇದೆ; ಧಾರ್ಮಿಕ ವೈವಿಧ್ಯಮಯ ಪರಂಪರೆಯ ದೃಷ್ಟಿ ಬಹು ವ್ಯಾಪಕ ವಾಗಿದೆ. ಕುಲಛಲದಿಂದ ಈ ನಾಡು ಕಾಡಾಗುತ್ತಿದೆ, ಮಾನವ ಜನಾಂಗ ತತ್ತರಿಸುತ್ತಿದೆ. ಜಾತೀಯ ವಿಷ ಸುತ್ತೆಲ್ಲ ಹರಡಿನಿಂತಿದೆ; ತನ್ನ ಜಾಲವನ್ನು ಹಾಕಿನಿಂತಿದೆ. ಸಮಸ್ತ ಮಾನವ ಕುಲಕ್ಕೆ ಬೆಂಕಿ ಇಟ್ಟಿದೆ. ಈ ಬಗೆಯ ಮತಭೇದಗಳಿಂದಾಗಿ ಮಾನವ ಕುಲ ನಾಶ ವಾಗಬಾರದೆಂದು ಶ್ರೀಗಳ ವಿಶಾಲ ದೃಷ್ಟಿ ಮತ್ತು ಮನನೀಯ ವಾದ ಅವರ ಉಜ್ವಲ ವಿಚಾರಗಳು ಮೇಲಣ ಹಾಡಿನಲ್ಲಿ ಚೆನ್ನಾಗಿ ಗೋಚರವಾಗುತ್ತದೆ.ಅವರು ಏಕಾಂತವಾಸಿಗಳಾದರೂ ಲೋಕಾಂತ ವನ್ನು ಚೆನ್ನಾಗಿ ಬಲ್ಲವರಾಗಿದ್ದರೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ನಿದ ರ್ಶನವೇನು ಬೇಕು ? ಈ ಹಾಡು ಧರ್ಮಾಂಧರ ಮತೀಯ ಸಂಕುಚಿತ ಭ್ರಾಂತ ಬುದ್ಧಿಯನ್ನು ಶುದ್ಧಗೊಳಿಸುತ್ತದೆ. ಮಾರ್ಗ ದರ್ಶನ ಸೂತ್ರಗಳನ್ನು ಒದಗಿಸುತ್ತಿದೆ.

'ಎರಗದಿರು ಮನವೆ ನೀ ತನುವರ್ಣವನು ನೋಡಿ।
ತೆರೆಯೆ ಹುಳುಕುಂಟು ಗುಣವಿಲ್ಲ ನಾರಿಯೊಳು ॥ಪ॥

ಒಳಗೆ ನರಮಾಂಸಮಜ್ಜದ ಪುಂಜ ಮೇಲೆ ಬಹು।
ಮಲಿನ ಚರ್ಮದ ಹೊದಿಕೆ ಬೇರಿಲ್ಲವು॥

ಮಲಮೂತ್ರ ತುಂಬಿ ತುಳುಕುವ ದೇಹವನು ಮೆಚ್ಚಿ।
ಮಲಹರನ ಮರೆದು ಭವಕೆಳೆಯದಿರು ಮನವೆ ॥೧॥

ಮಾಯೆಯೊಳ್ಳೆವಳಲ್ಲ ಮೋಹಜಾಲವ ಬೀಸು-।
ಪಾಯದಿಂ ತನ್ನತ್ತ ಸೆಳೆಯುತಿಹಳು॥
ಹೇಯ ಮಾಡತಿಯಿವಳು ಸಾಯಗೊಲ್ಲುವಳು ಗುರು।
ಕಾಯೆ ಬಾರಳು ಮುಂದೆ ಜ್ಞಾನವಿರುತಿರಲು॥

ಮುದ್ದು ನುಡಿಗಳ ನುಡಿದು ಶುದ್ಧ ವ್ಯಾಖ್ಯಾನವನು।
ಸದ್ಧರ್ಮದಿಂದ ನೀಡುಣಿಸುತಿಹಳು॥
ಸಿದ್ಧ ಮಹಾಂತೇಶನ ಕುಬುದ್ಧಿಯಿಂ ಮರೆಸಿ
ಬದ್ಧ ಸಂಸಾರದೊಳ್ ಕೆಡಹುತಿಹಳವಳು[1] ॥೨॥

ಸಂಸಾರ ಬದ್ಧನಾದ ಮಾನವನು ಕೆಟ್ಟು ಹಾಳಾಗಿ ಹೋಗಬಾರದೆಂದು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಬಹು ಎಚ್ಚರಿಕೆಯ ಸಿಡಿ ನುಡಿಗಳನ್ನು ಎಸೆದಿದ್ದಾರೆ:ಮೇಲಣ ಹಾಡಿನಲ್ಲಿ. ಸಂಸಾರದ ಮಾಯೆಯೆಂಬ ಮುಸುಕಿನಲ್ಲಿ ಬಲಿಬಿದ್ದು ವಿಲಿವಿಲಿಒದ್ದಾಡುವ ನರನಿಗೆ ಹರನಾಗುವ ಮಾರ್ಗವನ್ನು ನೆನಪಿಗೆ ತಂದಿದ್ದಾರೆ. ಮರೆತು ಮಾನವನಾಗದೆ: ಅರಿತು ಶರಣನಾಗು ಎಂಬ ಸಂದೇಶವಿದೆ ಇದರಲ್ಲಿ. ಮಲ ಮೂತ್ರದಿಂದ ತುಂಬಿ ತುಳುಕುವ ಈ ಅಸ್ಥಿರ ದೇಹವನ್ನು ಮೆಚ್ಚಿ ಸದ್ಧರ್ಮದ ಸುವರ್ಣವಾರಿ.

೧. ಕೈವಲ್ಯದರ್ಪಣ– ಶಿ. ಶಿ. ಬಸವನಾಳ–ಪು. ೬

ಯನ್ನು ಬಿಡಬೇಡೆಂದು ಬೋಧಿಸಿದ್ದಾರೆ. ನಿಜಗುರುವಿನ ಉಪದೇಶಾಮೃತವನ್ನು ಸವಿಯದೆ ಹೋದರೆ ನಮ್ಮ ಬಾಳು ಬರಡು.

ಎಂಥ ಗ್ರಾಮಕೆ ಬಂದೆವೋ। ಹರಹರ
ಕಂತುಮರ್ದನ ಲಿಂಗವೆ ನಾವಿಂದು ॥ಪ॥

ಗಂಡರ ಕೊರಳು ಮುಖವು। ಹಾಳಯ್ಯ।
ಹೆಂಡಿರ ಕೊರಳು ಮುಖವು ಹಾಳೇ ॥
ಗಂಡಹೆಂಡಿರ ಮಧ್ಯದಿ। ಪುಟ್ಟಿರುವ।
ತುಂಡುಮಕ್ಕಳನು ನೋಡೆ ಅವು ಹಾಳೇ॥

ಹೇಳುವವರಾರಿಲ್ಲವು । ಆಚಾರ ।
ಕೇಳುವರು ಮುನ್ನಿಲ್ಲವು ಜಗದೊಳಗೆ
ಹೇಳು ಕೇಳುವರೆಲ್ಲರು । ಒಣಡಬ್ಬು ।
ಜಾಳಯ್ಯ ಭಾಳಾಕ್ಷನೆ ಶೋಧಿಸಲು ॥
ಕುಪಿತನಹ ಯಮನ ಕುರಿತು । ಜನವೆಲ್ಲ
ಅಪವಿತ್ರಕಾಯರಾಗಿ ಮನವೊಲ್ದು ॥
ಅಪರಿಮಿತಪಾಪವೆಂಬ । ಜಗದೊಳಗೆ
ತಪಸನೆಸಗುವರು ಬಹಳ ಕಾಣುವರು ॥೧

ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿಯುಂತೆ ಸಂಚರಿಸಿ ಭಕ್ತೋದ್ಧಾರ ಮಾಡುವದು ಚರಜಂಗಮನ ಲಕ್ಷಣ. ಹಾಗೆಯೇ ಮಹಾಂತ

---

೧. ಕೈ. ಪ. ಪು. ೨೯ ೩೦ ೩೧ ಪದ್ಯಗಳು ೨. ೮. ೧೦

ಶಿವಯೋಗಿಗಳು ವಸಂತಮಾಸದ ಸುಳಿಗಾಳಿಯಂತೆ ನಾಡನ್ನು ಸುತ್ತಿ ಸುಳಿದರು. ವಿವಿಧ ಸ್ವಭಾವದ ಜನರನ್ನು ಕಂಡರು. ಅವರ ನಡೆನುಡಿಗಳನ್ನು ತಿದ್ದಿದರು, ತೀಡಿದರು. ಭಕ್ತಿಯೋಗದ ಸಹಜ ಲೀಲೆಗಳನ್ನು ಮೆರೆದರು. ಒಂದು ಸಲ ಹಳ್ಳಿಯೊಂದಕ್ಕೆ ಆಗಮಿಸಿದ್ದಾರೆ. ಅಲ್ಲಿ ಕಂಡ ದೃಶ್ಯವನ್ನೇ ಮೇಲಿನ ಪದದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಅಲ್ಲಿಯ ಜನರ ಆಚಾರ-ವಿಚಾರಗಳನ್ನು ಕಂಡು ಕನಿಕರಿಸಿದ್ದಾರೆ. ಇಂದಿಗೂ ಇಂಥ ಕುಗ್ರಾಮಗಳನ್ನು ಕಾಣಬಹುದು.

ಸಂಸಾರದೊಳಗೆ ಸದ್ಗತಿಯುಂಟು ಕೇಳ್ ಮಗನೆ।
ಬಸವಾದಿ ಪ್ರಮಥರಿಗೇನಿದ್ದಿಲ್ಲವೇ॥
ಸಂಸಾರ ಹಿಡಿದು ಸನ್ಮಾರ್ಗದಲಿ ನಡೆವರಿಗೆ।
ಕುಶಲ ಶಂಕರ ತಾನೆ ಮೋಕ್ಷವನು ಕೊಡುವ[೧] ॥೧॥

ಮಾನವ ಜನ್ಮವೇ ದುರ್ಲಭ. ದೇವರು ನೀಡಿದ ದಿವ್ಯ ಸಂಪದವಿದು. ಸಂಸಾರವು ಸಸಾರವಾಗಲು ಬೋಧಿಸುವ ಮೇಲಿನ ಮಾತುಗಳು ಬದುಕಿಗೆ ನೆಮ್ಮದಿಯನ್ನು ತರುತ್ತವೆ. ಬಾಳು ಹಸನಾಗಲು, ಬಂಗಾರವಾಗಲು ತೋರಿದ ಸರಳ, ಸುಲಭ ಮಾರ್ಗವಿದು. ಸಂಸಾರದಲ್ಲಿದ್ದರೂ ಸನ್ಮಾರ್ಗದಲ್ಲಿ ನಡೆಯಬೇಕು. ಈ ಮಾರ್ಗದಲ್ಲಿ ನಡೆಯುವವರಿಗೆ ನಿಶ್ಚಿತವಾಗಿ ಶಿವನು ಕರುಣೆ ತೋರುವನು. ಜಗತ್ತು ನಶ್ವರವಲ್ಲ; ಹೇಯವಲ್ಲ, ಜಡ

---

೧. ಕೈವಲ್ಯದರ್ಪಣ ಪ್ರ. ೪೯, ಪ: ೨.

ವಲ್ಲ. ಇದೊಂದು ಕರ್ತಾರನ ಕಮ್ಮಟ. ಇಲ್ಲಿ ಸಲ್ಲುವನು ಅಲ್ಲಿಯು ಸಲ್ಲುತ್ತಾನೆಂಬ ಶರಣವಾಣಿ ನಿನದಿಸಿದೆ.

ಎಂತಪ್ಪ ಮಗನು ಪುಟ್ಟಿದನಯ್ಯ ಗುರುರಾಯ।
ಚಿಂತೆಯಲಿ ತೊಳಲಿ ಬಳಲಿಸುವನೆನ್ನ ॥ಪ॥

ಹೊನ್ನೆಂಬ ಕಡಲೆಯನು। ಹೆಣ್ಣೆಂಬ ಬೆಲ್ಲವನು।
ಮಣ್ಣೆಂಬ ಕುಂಚಿಗೆಯವೊಳಗೆ ಹಾಕಿ॥
ತಿನ್ನುವೆನು ಕೊಡುಯೆಂದು। ಎನ್ನ ಬಲು ಕಾಡುವನು।
ಸನ್ಮತವ ಪೇಳಿ ಸಲಹಯ್ಯ ಶಿವನೇ ॥೧॥

ಕಂಡು ಕಂಡುದ ಬೇಡಿ। ಬಂಡುಮಾಡಿಯೆ ಯಮನ।
ಕುಂಡದೊಳು ಹಾಕುವನು ಮುಂದೆ ಹೃದಯ–॥
ಪುಂಡರೀಕದೊಳಿರುವ। ಮಂಡಲತ್ರಯವಾಸ।
ಖಂಡಿಸೈ ಈ ಮಗನ ಶಿರವ ಬೇಗ॥
ಜಗದೊಳಗೆ ಮಹಾಂತೇಶ ನಗೆಗೇಡಾವರೆ ಏನು।
ಮಗನ ಸಂಹರಿಸಿ ಮೋಕ್ಷವನಿಯೋ ಎನಗೆ[1] ॥೨॥

ಪದುಳ ಪಡೆಯುವ ಮಾರ್ಗವನ್ನು ತೋರಿಸಿರುವುದು ಈ ಪದದಲ್ಲಿ ಎದ್ದು ಕಾಣುತ್ತದೆ.

"ಬೇಡದಿರು ನರರಕೊಂಡಾಡದಿರು ಹಿಂಸೆಯಂ
ಮಾಡದಿರು ಪಾಪಕೆಡೆಯಾಡದಿರು ಕುಪಿತರೊಡ
ನಾಡದಿರು ಕಾಮದೊಳು ನೋಡದಿರು ಪರಸತಿಯ
ಕೂಡದಿರು ಕನಸಿನಲ್ಲಿ

---

೧. ಕೈ. ದ. ಪು. ೧೧–೧೨

ಲೋಕೋತ್ತರ ಸಂಸ್ಕೃತಿಯ ಮಂದಾರ; ನಾಗರಿಕತೆಯ ಶೃಂಗಾರ ಮೇಳೈಸಿ ಹಾಡಿನಲ್ಲಿ ಒಡಮೂಡಿದೆ. ಜನತೆಯಲ್ಲಿ ಆತ್ಮವಿಶ್ವಾಸ ಬೆಳೆಸಿ ಆಧ್ಯಾತ್ಮವನ್ನು ಅರಳಿಸುವ ಪುಣ್ಯಕಾರ್ಯದಲ್ಲಿ ಶ್ರೀಗಳದು ಸಿದ್ಧಹಸ್ತ. ಜಗದ ವಸ್ತುಗಳು ತಿರಸ್ಕಾರಕ್ಕಲ್ಲ; ಪುರಸ್ಕಾರಕ್ಕಾಗಿ ಇವೆಯೆಂಬುದು ಈ ಹಾಡುಗಳಲ್ಲಿ ಪಡಿಮೂಡಿದೆ.

ಸಾಕು ಪರಿಪರಿಸೆನ್ನ ದೇಹ ದುರ್ಗುಣಗಳನು
ನೂಕನುಗ್ಗನು ಮಾಡಿ ಕಾಡುತಿಹವು[೧]
ಆರಿಗುಸುರಲಿ ನಾನು ಭವ ಬಾಧೆಗಳನಿನ್ನು
ಮಾರಾರಿ ಶರಣರುಗಳೆಲ್ಲಿಲ್ಲಿ ಕಾಣಿಸರು॥[೨]

ಇಂತಹ ಅನೇಕ ಗೀತಗಳಲ್ಲಿ ಆತ್ಮವೀಕ್ಷಣೆ, ವಿರತಿಗಾಗಿ ಅವರು ಹಂಬಲಿಸುವ ರೀತಿ ವಿಧಾನಗಳು ಕಂಡುಬರುತ್ತವೆ. ಈ ಮಾರ್ಗದಲ್ಲಿ ಮುಂದಡಿಯಿಟ್ಟು ಗುರಿ ಮುಟ್ಟಿದ ಬಸವಾದಿ ಶರಣರನ್ನು ಮತ್ತೆ ಮತ್ತೆ ಸ್ಮರಿಸಿಕೊಂಡು ಅವರಿಂದ ಸ್ಫೂರ್ತಿ ಪಡೆದಿದ್ದಾರೆ. ನಿತ್ಯ ನೂತನ ಸತ್ಯ ಸನಾತನ ಮಾನವೀಯ ಮೌಲ್ಯಗಳನ್ನು ಎತ್ತಿಕೊಂಡು ಮನಂಬುಗುವಂತೆ ಹಾಡಿದ್ದಾರೆ. ಜನಮಾನಸದಲ್ಲಿ ಭಕ್ತಿ ಭಾವನೆಯು ಸುಳಿದೆಗೆದು ಬೆಳೆಯುವಂತೆ ಹಾಡಿದ್ದಾರೆ. ಇವರ ಸಾಧನೆ—ಬೋಧನೆ, ಅನುಕಂಪೆಯಿಂದ ಪ್ರೇರಿತವಾದುದು. ಜನರ ಅಜ್ಞಾನ, ಅಹಂಕಾರ ಮೂಢನಂಬಿಕೆ, ದುಃಖ ದುಮ್ಮಾನಗಳನ್ನು ಕಂಡು ಮರ ಮರ ಮರಗುವವರು; ಅವರು. ಮರವೆಯನ್ನು ದಾಟಿ ಆಚೆಗೆ ನಿಂತು ನೋಡುವ ಅರಿವಿನ ಮಾರ್ಗ

೧ ಕೈವಲ್ಯ ದರ್ಪಣ—ಶಿ. ಶಿ. ಬಸವನಾಳ ಪು.೧೪
೨ ,, ,, ಪು. ೧೫

ವನ್ನು ರೂಢಿಸಿಕೊಳ್ಳಲು ಸೂಚಿಸಿದ್ದಾರೆ. ಈ ಜಗತ್ತಿನಲ್ಲಿ ಸುಖ ದುಃಖಗಳನ್ನು ಎದುರಿಸಿಯೇ ಆ ಮಾರ್ಗದಲ್ಲಿ ನಡೆಯಬೇಕೆಂಬು ದನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ಅಲ್ಲದೆ ದುಃಖಗಳು ಬಂದಾಗ ಕುಗ್ಗಬಾರದು; ಅವು ನಮ್ಮನ್ನು ರೂಪುಗೊಳಿಸುವ ದೈವೀ ಕೃಪಾ ಹಸ್ತಗಳೆಂಬ ಶರಣತತ್ತ್ವ ಪರಂಪರೆಯಲ್ಲಿ ತಮ್ಮ ಕೆಲವು ಹಾಡುಗಳಲ್ಲಿ ಮೂಡಿಸಿಯೂ ಇದ್ದಾರೆ.

ಕಾಡು ಕಾಡೈ ಶಿವನೆ। ಕಾಡದಿರ್ದರೆ ನೀನು।
ಕೋಡಿಮನ ಕಾಡೆನ್ನ ಬುದ್ಧಿ ಕೆಡಿಸುವುದು ॥ಪ॥

ತಂದೆ ಬಡಿದರೆ ಬುದ್ಧಿ । ಮಂದಿ ಬಡಿದರೆ ಕೆಡಕು ।
ಇಂದುಧರ ನಿನ್ನಾಣೆ ಗಿರಿಜೆಯಾಣೆ ॥
ಸಂದ ಪುರಾತನರ । ಬಂದು ಕಾಡಿದರೆ ನೀ।
ಹೊಂದಿದರು ಮುಕ್ತಿಯನು ಪೊಂದುತಿಪರೆ ॥೧॥

ಚೆದುರ ನೀ ಕಾಡಿದರೆ । ಪೆಸರದಲೆ ಶರಣರು
ಪದುಳದಿಂ ಮುಕ್ತಿಯನು ಪಡೆವರಯ್ಯಾ ॥
ಕುದಿಯಲೇತಕೆ ಇನ್ನು । ಸದಮಲಾತ್ಮನೆ ನಾನು
ತದುಕಿದರೆ ಬುದ್ಧಿ ಬರುವುದು ಮಗನಿಗೆ[೧] ॥೫॥

ಈ ಹಾಡು 'ಕರಗಿಸಿ ಎನ್ನ ಮನವ ಕಾಳಿಕೆಯ ಕಳೆಯಯ್ಯಾ' ಎಂಬ ಬಸವಣ್ಣನವರ ಮಾತನ್ನು ನೆನಪಿಗೆ ತರುತ್ತದೆ. 'ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯಾ, ಬೇಡಿದರೆ

೧. ಕೈ ದ. ಪು. ೩೨. ಪ. ೧. ೫.

ಇಕ್ಕುವಂತೆ ಮಾಡಯ್ಯಾ: ಇಕ್ಕಿದೊಡೆ ನೆಲಕ್ಕೆ ಬೀಳುವಂತೆ ಮಾಡಯ್ಯಾ' ಎಂಬ ಅಕ್ಕಮಹಾದೇವಿ ವಚನವೂ ಸ್ಮರಣೆಗೆ ಬರುತ್ತದೆ. ಮಾನವನಿಗೆ ಧೈರ್ಯವನ್ನು, ಸ್ಥೈರ್ಯವನ್ನು ನೀಡಿ ಅವನ ಮುದುಡಿದ ಮನವನ್ನು ಅರಳಿಸುವ ಬಗೆ ಹಿತಮಿತವಾಗಿದೆ; ಚೇತನದಾಯಕವಾಗಿದೆ. 'ಚಂದಾಗಿ ಹಾಡಿ ನೀ ಹೊಂದಿಸೋ ಪಾದಕೆ' ಎಂದು 'ಮನಮುಟ್ಟಿ' ಹಾಡಿಕೊಂಡಿರುವುದು ಅವರ ಅರ್ಪಣಾ ಭಾವಕ್ಕೆ ಸಾಕ್ಷಿ.

ಹರಪೂಜೆ ಗುರು ಸೇವೆ ವರಪುಣ್ಯವಿಲ್ಲದೆ ।
ಬರಿದೆ ಸುಖಭೋಗ ದೊರಕುವದುಂಟೆ ಆತ್ಮ ॥ಪ॥
ಹಣವಿದ್ದಾಗಲೆ ಭಕ್ತಿ ನೆಣವಿದ್ದಾಗಲೆ ಸೇವೆ ।
ಗುಣವಿದ್ದಾಗಲೆ ಮಾಡಿ ಮುಕ್ತಿ ಪಡೆಯಾತ್ಮ ॥
ಬಣ ಮಾತಾಡಿದರೆಲ್ಲ ಸಣೆ ಹರಿದು ಹೋಗುವದೆ
ತ್ರಿಣಯನೊಲಿಸುವದು ಬಹು ಕರಕಷ್ಟವಾತ್ಮ ॥೧॥
ಹಿಂದಣ ಪುಣ್ಯವನು ಇಂದುಂಬುವುದಬೇಕು।
ಇಂದಿನ ಪುಣ್ಯವನು ಮುಂದುಂಡುಡಬೇಕಾತ್ಮ ॥
ಬಂಧನವೇಕಿದಕೆ ಇಂದುಧರನಾಣೆಯಾಗಿ।
ಸಂದೇಹವಿಲ್ಲವು ತಿಳಿ ಕಂಡೆಯಾತ್ಮ ॥೨॥

ಹರಿ ಅಜ ಸುರರೆಲ್ಲ ಶರೀರ ದಂಡನೆ ಮಾಡಿ।
ಪರಮಾತ್ಮನೊಲಿಸಿದರು ಸುಗಮವಲ್ಲಲೆ ಆತ್ಮ ॥
ನರಪಾಪಪುಣ್ಯವನು ನರಕಸೆರಗಿಲಿ ಹಾಕಿ
ಗುರು ಮಹಾಂತಲಿಂಗ ತಾ ಮರೆಯಲಾಗಿರುತಿರುವ[1] ॥೩॥

೧. ಕ್ರೈ. ದ. ಶಿ. ಶಿ. ಬಸವನಾಳ ಪು. ೪೨-೪೩

ಭಕ್ತಿಮಾರ್ಗವು ಸರಳವೂ ಅಹುದು, ಕಠಿಣವೂ ಅಹುದು. ಅದು ಕರಗಸದಂತೆ ಹೋಗುತ್ತೊಮ್ಮೆ ಕೊಯ್ಯುವದು: ಬರುತ್ತೊಮ್ಮೆ ಕೊಯ್ಯುವದು. ಇದನ್ನು ಸಾಧಿಸುವ ಸುಲಭ ದಾರಿಯನ್ನು ಮೇಲಣ ಹಾಡು ವಿದಿತಗೊಳಿಸುತ್ತದೆ. ಇಲ್ಲಿ ಅನುಭವ ಅನುಭಾವಗಳ ಸುಂದರ ಸಂಗಮವಿದೆ. ಸುಖದ ದಾರಿಯಿದೆ ಗುರಿಯಿದೆ, ನಿರಿಯಿದೆ. ಹಣ ಗುಣ ನೆಣಗಳಿರುವಾಗಲೇ ಹರ ಪೂಜೆ ಗುರುಸೇವೆ ಮಾಡಿ ಮುಕ್ತಿ ಪಡೆಯುವ ಹದವಾದ ಬಗೆಯನ್ನು ದೃಷ್ಟಾಂತಗಳಿಂದ ವಿವರಿಸಿರಿವುದು ಗೋಚರವಾಗುತ್ತದೆ.

'ಜೋಕೆ ಕಂಡ್ಯಾ। ಆತ್ಮ। ಜೋಕೆ ಕಂಡ್ಯಾ॥
ಕಾಕು ಸ್ತ್ರೀಯರ ಬಳಗವ। ನೇಕ ಬರುತಿಹುದಿಲ್ಲಿ ॥ಪ॥
ಮರವೆಯ ಮನೆಯೊಳ। ಗರವಿಲ್ಲದಂಗನೆಯರು॥
ಪರಿಪರಿ ನೆರೆದು ನಿನ್ನ॥ ಮರುಳ ಮಾಡುವರಯ್ಯಾ ॥೧॥
ವಿರತಿ ವಿರತಿಯೆಂದು। ನಿರುತಾಗಿ ನುಡಿವೆ ನೀನು॥
ವಿರತಿಯೆಂತೆಂಬ ದೃಷ್ಟ। ಅರಿತರೆ ತಿಳಿವುದಿಲ್ಲಿ ॥೨॥
ನೋಡದೆ ನುಡಿಸದೆ। ಮಾಡಬಹುದು ವಿರತಿ।
ನಾಡಿರಿಯಲು ಮಹಂತ।ಪ್ರೌಢನೊಳ್ ರತಿಯಿರಲಿ[೧] ॥೩॥

ಮಾಯೆಯ ವಿವಿಧ ಪರಿಯನ್ನು ನಿರೂಪಿಸಿ ಅವುಗಳ ಮಧ್ಯದಲ್ಲಿದ್ದೂ ವಿರತಿಯನ್ನು ಸಾಧಿಸುವ ಬಗೆಯನ್ನು ಧ್ವನಿಸಿದ್ದಾರೆ; ಈ ಹಾಡಿನಲ್ಲಿ ಪದ್ಮಪತ್ರದಂತೆ ಪ್ರಪಂಚದಲ್ಲಿದ್ದೂ ಪಾರಮಾರ್ಥ ಸಾಧಿಸುವ ದಾರಿಯನ್ನು ಕಾಣಬಹುದು.

---

೧. ಕೈ. ದ. ಪು. ೧೩

'ಮಗನ ತೂಗಿರೋ । ಭಕ್ತರು ಮಗನ ತೂಗಿರೋ ।
ಅಗಜೆ ತನಗೆ ಮೊಲೆಹಾಲಿಲ್ಲದೆ । ಜಗಕೆ ಕಳುಹಿದಳು ಪುತ್ರನ ॥ಪ॥

ಭಕ್ತಿರಸವ ದಣಿಯಲುಂಡು । ಶಕ್ತಿವಂತನಾಗಿ ಬಹಳ॥
ಮುಕ್ತಿಮಾರ್ಗ ಹಿಡಿದು ಬಾರೆಂ । ದ್ಯುಕ್ತಿಯಿಂದ ಕಳುಹಿದಳು ॥೨॥

ತಾಯಿ ತಂದೆಗಳನು ಅಗಲು-। ಪಾಯ ತಪ್ಪಿ ಧರೆಗೆ ಬಂದೆ॥
ಸಾಯಗೊಡದೆ ಭವದಿ ಕೆಡಹಿ । ಘಾಯಮಾಸಿ ಜನ್ಮರೋಗದ ॥
ಪರಮ ಶಿಶು ಮಹಾಂತೇಶ ಗಿರಿಜೆ । ಹಿರಿಯ ತಾಯಿ ತಂದೆಗಳೆನ್ನ
ಮರೆತರವರು ಮಗನ ಚಿಂತೆ । ಗುರಿಯ ಮಾಡಿದರಯ್ಯ ನಿಮಗೆ[1] ॥೩॥

ಇದೊಂದು ಅಪೂರ್ವ ಅಪರೂಪ ಅನುಭಾವ ಗೀತೆ. ಕಲ್ಪಕತೆಯ ರಮಣೀಯತೆ ಸಹಜವಾಗಿ ಇಲ್ಲಿ ಮೂಡಿ ಬಂದಿದೆ. ಈ ರಸಾನುಭಾವವೆಂಬ ಸಾಗರದಲ್ಲಿ ಮಿಂದು ಪಾವನವಾಗಬಹುದು. ಗಿರಿಜೆ ಅಲ್ಲಿ ಹಾಲಿಲ್ಲದೆ ತನ್ನ ಮಗುವನ್ನು ಇಲ್ಲಿಗೆ ಕಳಿಸಿದಳಂತೆ! ಇಲ್ಲಿ ಭಕ್ತಿರಸವ ದಣಿಲುಂಡು ಶಕ್ತಿವಂತನಾಗಿ ಬರಲು. ಈ ಶಿಶುವನ್ನು ತೊಟ್ಟಿಲಲ್ಲಿಟ್ಟು 'ಜೋ ಜೋ ಮಹಾಂತಲಿಂಗ ಶ್ರೀ ಕಂದ ಜೋ ಜೋ' ಎಂದು ಜೋಗುಳ ಹಾಡಿ ತೂಗುವ ಸುಂದರ ಸನ್ನಿವೇಶ ಭಕ್ತಿವಂತರಿಗೆ ರೋಮಾಂಚನವನ್ನುಂಟು ಮಾಡದಿರದು.

---

೧. ಕೈ. ದ. ಪು. ೧೦೨.

'ಅಗ-ಜೆ[೨]:- ಹಿಮಗಿರಿತನಯೆ: ಬೆಟ್ಟದಿಂದ ಹುಟ್ಟಿಬಂದ ವಳು. ಶಿಲಾರೂಪದ ಮಾತೆಯಿಂದ ಮೊಲೆ ಹಾಲು ಬಾ ಎಂದರೆ ಎಲ್ಲಿಂದ ಬರುತ್ತವೆ? ಎಲ್ಲಿ ಪ್ರಾಣವಿದೆಯೋ, ಎಲ್ಲಿ ಚೈತನ್ಯ ವಿದೆಯೋ ಅಲ್ಲಿ ಮೊಲೆ ಹಾಲು ಬರುವುದು ಸಹಜ. ಶ್ರೇಷ್ಠ ಸಾಹಿತ್ಯದ ಜೀವಾಳವಾದ 'ಧ್ವನಿ' ಇದೆ ಇಲ್ಲಿ! ಶಿವಶರಣರ ಬೆಡ ಗಿನ ಭಾಷೆಯ ವರ್ಣನಾ ವೈಖರಿಯನ್ನು ನಾವು ಇಂಥ ಸಾಹಿತ್ಯ ದಲ್ಲಿ ಗುರುತಿಸಿ ನಲಿಯಬಹುದು[೧]'.

ಲಾಲಿ ಲಾಲಿಯು ಪರಬ್ರಹ್ಮದ ಶಿಶುವೆ ।
ಮಾಲೆಯ ಧರಿಸುವೆ ಮಲ್ಲಿಗೆ ಹೂವಿನ ॥ಪ॥

ಅಷ್ಟದಳದ ಕಮಲತೊಟ್ಟಿಲೊಳಗೆ ಮಲಗಿ ।
ಶ್ರೇಷ್ಠ ಸದ್ಗುಣ ಹಸ್ತ ಪದಗಳನಾಡುತ ॥
ನೆಟ್ಟನೆ ನಿಟಿಲ ಭ್ರೂಮಧ್ಯದ ಜ್ಯೋತಿಯು ।
ದೃಷ್ಟಿಸಿ ನೋಡುತ ಕಿಲು ಕಿಲು ನಗುತಿಹ ॥೧॥

ಪ್ರಣವ ಘೋಷದ ನಾಗಸ್ವರ ವೇಣಿ ವಾಸುಕಿ ।
ಝಣರಝಣಂ ಘಲ್ಗೆಜ್ಜೆ ತಾಳ ಮೃದಂಗ ಭೇರಿ ॥
ಢಣ ಢಣೆಂಬುವ ಘಂಟೆ ಜಾಗಟೆ ನಾದವ ।
ಬಣ್ಣಿಸಲಿವ ಶಿವ ಸುಖಮಯ ಕಂದನ ॥೨॥

ಫಲಪದಗಳ ಮೀರಿ ಶಿವ ಪದವೆಂಬುವ ।
ಹೊಳೆವ ಮೇಲುಪ್ಪರಿಗೆ ಮೇಲೆ ಕುಳಿತು ಮಾಯಾ॥
ಕಲಿಯುಗ ನರ್ತಕಿಯಾಟವ ನೋಡುತ ।

---

೧. ಶಿವಯೋಗ ಸಂಪುಟ ಶ್ರೀ ಸುಂದರೇಶನ್‌ರ ಲೇಖನ ನೋಡಿ

ನಲಿವ ಪರಶಿವ ಮಹಾಂತಲಿಂಗ ಶ್ರೀಬಾಲಕಗೆ ॥೩॥
ಎಂಥ ಶಿಶು, ಎಂಥ ತೊಟ್ಟಿಲು, ಎಂಥ ತಾಯಿ,
ಎಂಥಲಾಲಿ ।
ಇಂಥ ಲಾಲಿ ಜಗತ್ತಿನಲ್ಲಿ ಇದೊಂದೆ. ಇದು ಮಹಾಂತ
ಶಿವಯೋಗಿಗಳು
ತೊಟ್ಟಿಲಲ್ಲಿ ಕಂಡ ವಿಶ್ವದರ್ಶನ![೨]

ಬಾಲಲೀಲಾ ಮಹಾಂತ ಶಿವಯೋಗಿಗಳ ವಾಣಿ ಪ್ರಾಸಾದಿಕ ವಾಣಿ. ಅವರ ಹೃದಯದಿಂದ ಹೊರಹೊಮ್ಮಿ ಬಂದ ಜೋಗುಳ ಹಾಡು ಅಚ್ಚಮಲ್ಲಿಗೆಯ ಹೂವಿನಂತೆ ತನ್ನ ಸೌರಭದ ಪರಿಮಳಗಳನ್ನು ಹರಡಿ ನಿಂತಿದೆ ಇದೊಂದು ಉನ್ನತ ಮಟ್ಟದ ಅನುಭಾವಗೀತೆ. ಶೈಲಿಯೂ ಅಷ್ಟೇ ಸಹಜ! ಸುಂದರ!!

ಅವರ ಕಳಕಳಿಯ ಕರುಳಿನ ಕರೆ ಈ ಕೆಳಗಣ ಪದ್ಯದಲ್ಲಿ ಹೃದ್ಯವಾಗಿ ಚಿತ್ರಿತಗೊಂಡಿದೆ. ಅವರ ಬಯಕೆ-ಬೇಡಿಕೆಯಿದು.

ಕರಕರಿಯ ಮಾಡುವುದು ಪರಮ ಶಿವಯೋಗಿ ಶಿಶು ।
ಪರಿಪರಿಯ ಭಕ್ತ ತಾಯಿ ತಂದೆಗಳಿಗೆ ॥ಪ॥
ಶರಣ ಭಕ್ತರ ಪಾದ ಸ್ಮರಣೆಯೆಂಬ ಹಾಲ।
ಭರದಿ ಕುಡಿದೇನೆಂದು ತವಕಿಸುವುದು ॥

೧. ಕೈ. ದ. ಪು. ೧೧೪-೧೧೫
೨. ಶರಣಚರಿತಾಮೃತ-ಸಿದ್ಧಪ್ಪ ಪುರಾಣಿಕ ಪು. ೬೮೮

ಪರಜ್ಞಾನರಸ ತುಂಬಿ ಪರಿಪಕ್ವವಾದಸವು ।
ಪರಮ ಮುಕ್ತಿಯ ಹಣ್ಣು ಬೇಡುತಿಹುದು ॥೧॥
ಗುರುಕರುಣ ತೊಟ್ಟಿಲೊಳು ಕಿರಿದಾಗಿ ಭಕ್ತರಿಗೆ
ಹರುಷದಿಂದಾಡಬೇಕೆನ್ನುತಿಹುದು॥
ಗುರುಕರುಣ ಮುತ್ತಿನ ಪರಮ ಟೊಪ್ಪಿಗೆ ಕಂಥೆ ।
ಸ್ಥಿರವಾಗಿ ಧರಿಸಬೇಕೆನ್ನುತಿಹುದು ॥೨॥
ಹರಸ್ತೋತ್ರ ಕಿವಿಗೊಟ್ಟು ಸುರುಳಿತದಿ ಕೇಳುವ ।
ವರಬಾಲ ವಸ್ತುಗಳ ಬಯಸುತಿಹುದು ॥
ಗುರು ಮುನಿಯೆ ಹರ ಕಾಯುಲಿರಿಯು ಯಮ ನರಕವೆಂ।
ದರುವಿಸೆಜ್ಜರದೆಳಗ ಹೆತ್ತೇನೆಂಬುವದು ॥೩॥

ಇಂತಹ ಸತ್ವಶುದ್ಧಿಯ ಉದಾತ್ತ ಸಾಧನೆಗಳಿಗಾಗಿ ಲೌಕಿಕ ಕಾಮನೆಗಳ ಯಮಲೋಕವನ್ನು ಧಿಕ್ಕರಿಸಿ, ಶಿವಲೋಕದ ಸತ್ಯ ಸುಖವನ್ನು ಬಯಸುವ ಬಯಕೆ ಇಲ್ಲಿ ಸ್ಫುಟವಾಗಿ ಮೂಡಿ ಬಂದಿದೆ.

ಶಾಸ್ತ್ರದ ಗಡುಚಾದ ವಿಷಯವನ್ನು ಸುಲಭವಾದ ಸರಳವಾದ ತಿಳಿಗನ್ನಡದಲ್ಲಿ ತಿಳಿಸುವ ಕಲೆಯಲ್ಲಿ ಮಹಾಂತ ಶಿವಯೋಗಿಗಳು ನಿಷ್ಣಾತರೆಂಬುದು ಈವರೆಗಿನ ವಿವೇಚನೆಯಿಂದ ಕಂಡು ಬರುತ್ತದೆ. ಅವರು ಯಾವುದೇ ವಿಷಯವನ್ನು ತಿಳಿಸಲಿ: ಅದು ಓದುಗರ ಮನಸ್ಸಿಗೆ ಥಟ್ಟನೆ ನೆಡುವಂತೆ ನಿರೂಪಿಸುವ ಜಾಣ್ಮೆ ಅವರಿಗೆ ಸಹಜವಾಗಿ ಒಲಿದು ಬಂದಿದೆ: ಶ್ರೀಗಳ ಹಾಡು, ಪದ

೧. ಕೈ. ದ. ಪು. ೧೦೭

ಂದಗಳೆಲ್ಲ ಸಾಮಾನ್ಯರ ಮಟ್ಟಕ್ಕೆ ನಿಲುಕುವಂತಿವೆ.ಅವರ ಹೃದಯ ದಲ್ಲಿ ಶಿವಭಕ್ತರಸದ ಬುಗ್ಗೆಯನ್ನು ಚಿಮ್ಮಿಸುವಂತಿವೆ.

ಕನ್ನಡನಾಡಿನ ಸಾಹಿತ್ಯ–ಸಂಸ್ಕೃತಿ ತತ್ತ್ವಜ್ಞಾನಗಳ ಸುಂದರ ಸಂಗಮವಾದ ಹೊಂಬೆಳಗು ಈ ತತ್ತ್ವಪದಗಳಲ್ಲಿ ಮೂಡಿ ಬಂದಿದೆ. ಇವರ ಮಂಗಳ ಪದ್ಯಗಳಂತೂ ಬಹು ಸೊಗಸಾಗಿವೆ; ಇಂಪಾಗಿವೆ. ಉದಾಹರಣೆಗಾಗಿ ಈ ಪದವನ್ನು ನೋಡಬಹುದು.

ಮಂಗಳಾರತಿಯೆತ್ತಿರೆ ಸರ್ವಾಂಗ ಲಿಂಗಮಯ ಶಿವಯೋಗಿಗೆ
ಗಂಗೆ ಸರಸ್ವತಿ ಯಮುನೆ ನದಿಮಂತ್ರಮಯವಾಗಿ ರಂಜಿಸುವ
ಪರಮಾತ್ಮಗೆ।
ಶಿವಯೋಗ ನಿದ್ರೆಯೊಳಗೆ ತಾನಿದ್ದು ಭವ ಜಾಡ್ಯ
ಜಯಿಸಿರ್ಪಗೆ ।
ಭುವಿಜನರ ಸಂಸಾರಗೋಷ್ಠಿಗಳನತಿಗಳೆದ ಸವಿಯದಾನಂದ
ಪರಗೆ ॥೧॥
ವೇದ ಶಾಸ್ತ್ರಕೆ ನಿಲುಕದ ಮಹಾ ಮಂತ್ರ ಬೋಧೆ
ನೆಲೆಗೊಂಡಾತಗೆ।
ಮೇದಿನಿಗೆ ಚಿದ್ವಿಲಾಸವತಾರ ಮಾಡಿದನಾದಿ
ಪರಶಿವಮೂರ್ತಿಗೆ ॥೨॥
ಆನೆ ನುಂಗಿದ ಬೆಳವಲ ಫಲದಂತೆ ತಾನು ತಾನಾಗಿರುವಗೆ,॥
ಮೌನಿ ನಿರಾಲಂಬ ಚದುರ ಮಹಂತೇಶ್ವರಗೆ ಜ್ಞಾನ
ಶಕ್ತಿಯರು ನೀವು[1] ॥೩॥

ಹಾಗೆಯೇ 'ಏಳೋ ಮಹಾಜ್ಞಾನಿ ಶಿವಯೋಗಿ ಮುನೀಶ್ವರ' "ಏಳಯ್ಯ ನಿಮ್ಮ ತಾಯಿತಂದೆಗಳು ಬಂದಿಹರು," 'ಜಯಮಂಗಳು

೧. ಕೈ. ದ. ಪು. ೧೧೮

ನಿತ್ಯ ಶುಭಮಂಗಳಂ' ಮೊದಲಾದ ಸುಂದರ ಬಂಧುರ ಪದಗಳು ಮನಸ್ಸಿಗೆ ಅಲೌಕಿಕ ಶಾಂತಿ ಸಮಾಧಾನವನ್ನುಂಟು ಮಾಡುವ ಮನೋಹರ ಮಂಗಳ ಗೀತೆಗಳು. ಅದುದರಿಂದಲೇ 'ಬೇಕು ಬೇಡೆಂಬೆರಡು ಬೀಜಗಳ ಹುರಿದು' 'ಸರ್ವಾಂಗ ಲಿಂಗಮಯನಾಗಿ ಲೋಕದೊಳಗಿದ್ದು ಇಲ್ಲದ ಮಹಿಮನಾದ' ಶಿವಯೋಗಿ ನೋಡುವ ವರ ಕಂಗಳಿಗೆ ವ್ಯಕ್ತಿಯಾಗಿ ತೋರಿದರೂ, ಆತನೊಂದು ಮಹಾಶಕ್ತಿ. ಇನ್ನೂ ಆಳವಾಗಿ ನೋಡಿದರೆ ವಿಶ್ವವನ್ನೊಳಗೊಂಡು ಮೀರಿನಿಂದ ವಿಶ್ವಾತೀತ ಶಕ್ತಿ.

(೧) ಶಿವಯೋಗಿ ಸಾಕ್ಷಾತ್ ಶಿವನಾದ ಕಾರಣದಿ (ಪ್ರ. ೩೯)

(೨) ಶಿವಯೋಗಿ ಶಿವನೇ ಸಾಕ್ಷಾತ್ ಕವಿಗಳಿಗೆ ವರ್ಣಿಸಲಳ ವಲ್ಲ (೮೧)

(೩) ಲಿಂಗವೆ ತಾನಾದ ಯೋಗಿಯು (೧೩೩)

(೪) ಶರಣು ಶ್ರೀ ಶಿವಯೋಗಿ ಮಹಾಂತ ಲಿಂಗನಿಗೆ (೯೧)

ಶಿವಯೋಗದ ನಿಬ್ಬೆರಗಿನಲ್ಲಿ ಹಾಡಿದ ಇಂತಹ ನುಡಿಗಳು ಕೈವಲ್ಯದರ್ಪಣದಲ್ಲಿ ಥಳಥಳಿಸುತ್ತಿವೆ. ಒಂದೊಂದು ಮಾತು ಅಂತರಂಗದ ರತ್ನ; ಅನುಭಾವದ ಸಕಲಸಂಪದ: ಈ ನುಡಿಗವ ಣಗಳು ಜ್ಯೋತಿರ್ಲಿಂಗದ ಕಿಡಿಗಳು.

ಶಿವಯೋಗಿಗಳ ಬಾಲಲೀಲೆಗಳು ಅನಂತ. ತೂಗು ಮಂಚದ ಮೇಲೆ 'ಪರಬ್ರಹ್ಮದ ಶಿಶು'ವಾಗಿ ಶ್ರೀಗಳು ಪವಡಿಸಿದ್ದಾರೆ. ಶ್ರೀ ಮಠಕ್ಕೆ ಬಂದಂಥ ಮಾತೆಯರನ್ನು ಲೀಲಾ ಸಂಭ್ರಮದಿಂದ ಕರೆದು ಅಪ್ಪಣೆ ಮಾಡುತ್ತಾರೆ! ಆ ಮಾತೆಯರ ಸಾನ್ನಿಧ್ಯದಲ್ಲಿ ತಮ್ಮ

ಅಂತರಂಗದ ಬದುಕೆಯನ್ನು ಅದೆಷ್ಟು ಮನೋಹರವಾಗಿ ಬಯಲಿಗಿಟ್ಟಿದ್ದಾರೆ. ನೋಡಿರಿ.

ಕಂದನ ತೂಗಿ ಬಂಧನ ನೀಗುವೆ ಬನ್ನಿರೆ ॥೭॥

ಬಾರೆ ಮುಕ್ತಾಯಕ್ಕ। ಬಾರೆ ಮಹದೇವಿ।
ಬಾರೆ ಬಸವರಾಣಿ ನೀಲಲೋಚನೆಯೆ ॥೮॥

ಬಾರೆ ಸತ್ಯಕ್ಕೆ। ಬಾರೆ ಚೋಳಕ್ಕ
ಬಾರೆ ಅಮ್ಮವ್ವೆ ನೀಕರೆಸಿಕೊಳ್ಳುವರೇನೆ ॥೯॥

ಚಿನ್ನ ಬೆಳ್ಳಿಯನೊಲ್ಲ ರತ್ನ ಮುತ್ತುಗಳೊಲ್ಲ।
ಮಣ್ಣಿನ ಮನಮುಟ್ಟಿ ತೂಗಿದರೆ ನಲಿವ ॥೧೦॥

ತನ್ನ ಲಿಂಗಾನಂದ ಚಿಕ್ಕ ತೊಟ್ಟಿಲದೊಳು।
ಚೆನ್ನಾಗಿ ನಲಿವ ಶ್ರೀ ಸಣ್ಣ ಮಹಂತ[1] ॥೧೧॥

ಭಕ್ತಿ, ನಿಷ್ಠೆ ಬಲಗೊಂಡರೆ ಮಾತ್ರ ಆತ ಒಲಿವನೆಂಬುದನ್ನು ಶಿವಶರಣೆಯರ ನಾಮಸ್ಮರಣೆಯೊಂದಿಗೆ ನೆನಪಿಗೆ ತರುವ ಈ ಪದಗಳನ್ನು ಹಾಡಿಕೊಂಡಷ್ಟು ನಮ್ಮ ಭಾವ ಶುದ್ಧವಾಗುವದು. ಈ ತತ್ತ್ವ ಪದಗಳಲ್ಲಿ ಸೌಂದರ್ಯವಿದೆ. ಗಾಂಭೀರ್ಯವಿದೆ. ಜಾನಪದ ಸಾಹಿತ್ಯ, ವಚನ, ಹಾಡುಗಬ್ಬಗಳು ಇಂದು ವಿಶ್ವ ಸಾಹಿತ್ಯದಲ್ಲಿ ಉಚ್ಚಸ್ಥಾನವನ್ನು ಪಡೆಯುತೊಡಗಿವೆ. ಕನ್ನಡ ನಾಡಿನ ಸಾಹಿತ್ಯ ಸಂಸ್ಕೃತಿಯು ಹೊಂಬೆಳಕನ್ನು ಬೀರುವಲ್ಲಿ ಇವುಗಳಿಗೆ ಅಗ್ರಸ್ಥಾನವಿದೆಯೆಂಬದನ್ನು ಕನ್ನಡಿಗರು ಮರೆಯುಲಾಗದು.

---

೧. ಕೈ ಪ. ಪು. ೧೦೫, ೧೦೬

೧೦. ಶ್ರೀಗಳ ವಾಣಿ ರಸಿಕರ ರಸಾಯನ

೧ ಬೆನ್ನ ಕುದುರೆಯು ಬಿಟ್ಟು ಕತ್ತೆ ಕಿದ್ದುವರೆ?

೨ ಸಂಕಟ ಬಂದಾಗ ಸಂಗಯ್ಯ ಲಿಂಗಯ್ಯ.

೩ ಅರಳಿ ಅಗ್ನಿಯ ಕೂಡೆ ಸೆಣೆಸಿ ಜೈಸುವದೆ?

೪ ಕೆಳಗಿರ್ದ ಹುಲಿಯು ಗರ್ಜನೆ ಕೇಳಿ ಮೇಲಿರ್ದ।
ಅಳಿಧೈರ್ಯನಳವಂತೆ ಅಳುವನೆ ವೀರ?

೫ ಗಾಳಿ ಬಂದ ಕೈಲೆ ಜನರು ಕಾಳು ತೂರಿಕೊಂಬುವಂತೆ।

೬ ಉರಿಯೊಳ್ ಹುಲ್ಲು ಬಿದ್ದುಳಿಯಲುಂಟೆ?

೭ ಸುರೆಯು ತುಂಬಿದ ಗಡಿಗಿಗೆ ಹೊರಪಟ್ಟ ಬರೆದಂತೆ
ಅರಹಿಲ್ಲದ ಶೀಲ.

೮ ಊರಿ ಗೊಂದೊಡಕೆಗೆ ಬಂದ ನ್ಯಾಯ

೯ ಬೆಲ್ಲವನ್ನು ಕಾಸುವರೆ ನಿಲ್ಲಿಬಾರದು ಜನರು

೧೦ ಹೇಂಗ ಮರೆಯಲೆ ಕಾಂತೆ ನೀ ಮಾಡಿದುಪ್ರಕೃತಿಯು।

೧೧ ಎಂತಪ್ಪ ಮಗನು ಪುಟ್ಟಿದನಯ್ಯ ಗುರುರಾಯ।
ಚಿಂತೆಯಲಿ ತೊಳಲಿ ಬಳಲಿಸುವೆನ್ನ

೧೨ ಜೋಕೆ ಕಂಡ್ಯಾ। ಆತ್ಮ। ಜೋಕೆ ಕಂಡ್ಯಾ
ಕಾಕು ಸ್ತ್ರೀಯರ ಬಳಗವ। ನೇಕ ಬರುತಿಪುದಿಲ್ಲ।

೧೩ ವನಗಿಳಿಯು ಬಂದೆನ್ನ। ಮನಗಿಳಿಯು ಬುದ್ಧಿಯನು।
ವಿನಯದಿಂ ಕೆಡಿಸಿ ಪೋಗಲು ಬಂದೆಯಾ

೧೪ ಭೋಗ ಮೃಗಂಗಳ ಬೇಂಟೆಯನಾಡಿದೆ।
ಯೋಗಿ ಕಿರಾತ ಕೇಳೆಂತ ಶೂರ॥

೧೫ ಸಿರಿವಂತರ ಮನೆಯನು ಬಿಡಿಸಿ ಗುರುಭಕ್ತಿಯನುಳ್ಳ
ಕಿರುಭಕ್ತರ ಮನೆ ತರುವ ಕಾವುದು ಲೇಸು.
೧೬ ತಂದೆ ಬಡಿದರೆ ಬುದ್ಧಿ, ಮಂದಿ ಬಡಿದರೆ ಕೆಡಕು
೧೭ ಸಿರಿಯು ಕೊಡದಿರು ಬಹಳ, ಹರ ನಿನ್ನ ಮರದೇವು
೧೮ ಕರಿಗೆ ಹೆದರದ ಪುರುಷ ಕುರಿಗೆ ಹೆದರುವದುಂಟೆ?
೧೯ ನಮ್ಮ ಸುಖ ಮೂಕ ಸಕ್ಕರೆ ಮೆದ್ದ ಪರಿಯಂತೆ.
೨೦ ಸೋರು ಸುಂಬಳ ಮಗುವು ತಂದೆ ತಾಯಿಗೆ ಹಿತವು
೨೧ ಗಜಗಳ್ಗೆ ಸಿಂಹ ತಾ ಸಣ್ಣ ಮರಿಯೆನ್ನಬಹುದೇ?

೧೧. ಶೈಲಿ

ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಆಗಿ ಹೋದ ಅನುಭಾವಿಗಳ ಪರಂಪರೆಯಲ್ಲಿ ಧ್ರುವತಾರೆಯಾಗಿ ಮಿನುಗಿದ ಶ್ರೀ ಬಾಲಲೀಲಾ ಮಹಾಂತಶಿವಯೋಗಿಗಳು ಕರ್ನಾಟಕದ ಸಂಸ್ಕೃತಿಯ ಇತಿಹಾಸದಲ್ಲಿ ಚಿರಸ್ಮರಣೀಯರು. ಜಗತ್ತಿನಲ್ಲಿ ಅನುಭಾವಿಗಳದೇ ಒಂದು ವಿಶಿಷ್ಟ ಪಂಗಡ. ಅವರು ಯಾವ ಧರ್ಮದಲ್ಲಿಯೇ ಹುಟ್ಟಿರಲಿ, ಯಾವ ಭಾಷೆಯನ್ನೇ ಮಾತಾಡಲಿ, ಯಾವ ಕಾಲದಲ್ಲಿಯೇ ಜೀವಿಸಿರಲಿ ಅವರೆಲ್ಲರ ಆಚಾರ ವಿಚಾರಗಳು ಸಾಮಾನ್ಯವಾಗಿ ಒಂದೇ ಬಗೆಯವು. ದೇಶ ಕಾಲ–ಪರಿಸರಗಳನ್ನು ಮೀರಿ ನಿಂತ ಈ ಅನುಭಾವಿಗಳು ಸತ್ಯವನ್ನೇ ಸಾರುತ್ತಾರೆ. ಶುಚಿ ಜೀವನ ನಡೆಸುತ್ತಾರೆ. ಅಂತಹ ವರ್ಗಕ್ಕೆ ಸೇರಿದವರು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು. ಇವರ ಶೀಲದಂತೆ ಇವರ ಶೈಲಿ. ತೀರ ಹೊಸಗನ್ನಡ ಶೈಲಿಯೂ ಅಲ್ಲ; ನಡುಗನ್ನಡ ಶೈಲಿಯೂ ಅಲ್ಲ. ಆವೆರಡರ ನಡುವಣಯುಗದ ಶೈಲಿ ಇವರದು

ಎಂಬುದರಲ್ಲಿ ಸಂದೇಹವಿಲ್ಲ. ಮನವನ್ನು ಒಮ್ಮೆಲೇ ಅರಳಿಸುವ ಶಿವಗುಣ ಇವರ ಶೈಲಿಯಲ್ಲಿದೆ. ಅದು ಸಹಜ ಸೌಂದರ್ಯದಿಂದ ಮೇಳವಿಸಿದೆ. "ಕವಿಯಾಗಿಯೇ ಹುಟ್ಟಿದವನಿಗಿಂತ ಹೆಚ್ಚು ಪ್ರತಿಭಾಪೂರ್ಣವಾದ ಕಾವ್ಯವನ್ನು ಈ ಅನುಭಾವಿಗಳು ರಚಿಸಿರುವರು"[೧] ಪಾಮರರಿಗೂ ಸುಲಭವಾಗಿ ತಿಳಿಯಲೇಬೇಕೆಂಬ ಹಿರಿಯ ಹಂಬಲ ಶ್ರೀಗಳದು. ತತ್ತ್ವಗಳನ್ನು ದೃಷ್ಟಾಂತ, ರೂಪಕ ಉಪಮೆಗಳಿಂದ ಸ್ಪಷ್ಟೀಕರಿಸಿದ್ದಾರೆ. ಕೆಲವು ಪದಗಳಂತೂ ದ್ರಾಕ್ಷಾಪಾಕವಾಗಿವೆ. ದೇಶಿಯ ಭಾಷೆಯನ್ನು ಧಾರಾಳವಾಗಿ ಬಳಸಿಕೊಂಡಿದ್ದಾರೆ. ಕೇವಲ ಸ್ಫೂರ್ತಿಯಿಂದ ಪ್ರಾಸಾದಿಕವಾಗಿ ಹೊರಹೊಮ್ಮಿದ ಈ ತತ್ತ್ವ ಪದಗಳು ತಲೆತುರಿಸಿ ಬರೆದವುಗಳಲ್ಲ. ಶ್ರೀ ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ, ಶ್ರೀ ಸರ್ಪಭೂಷಣಶಿವಯೋಗಿಗಳ 'ಕೈವಲ್ಯ ಕಲ್ಪವಲ್ಲರಿ'ಯಲ್ಲಿ ಕಂಡು ಬರುವ ಅನುಭವವೇ ಇವಕ್ಕೆ ತಳಹದಿಯಾದರೂ ಅವುಗಳಲ್ಲಿ ತೋರುವ ತತ್ತ್ವವಿವೇಚನೆಯ ಗಡಚು ಇಲ್ಲಿಲ್ಲ.

ಒಟ್ಟಿನಲ್ಲಿ ಇವರ ಶೈಲಿ ಸರಳ ಸುಂದರ; ಲಲಿತ ಮನೋಹರ. ಸಮುಚಿತ ಛಂದಸ್ಸು ಅಲಂಕಾರಗಳಿಂದ ಕೂಡಿ ಭಾವಗರ್ಭಿತವಾಗಿದೆ. ಅರ್ಥಪೂರ್ಣವಾಗಿವೆ. ಜನ ಸಾಮಾನ್ಯರ ಚಿತ್ತ ಭಿತ್ತಿಯ ಮೇಲೆ ಅಚ್ಚೊತ್ತಿ ಮೂಡಿ ನಿಲ್ಲುವಂತಿವೆ. ಶಾಸ್ತ್ರದ ಕಠಿಣ ಮಾತುಗಳ್ನು ನೀತಿಯ ಮುತ್ತುಗಳನ್ನು ತಿಳಿಗನ್ನಡದಲ್ಲಿ ತಿಳಿಸುವ ಕಲೆ ಶ್ರೀಗಳಿಗೆ ಕರತಲಾಮಲಕವಾಗಿದೆ. ಕೈವಲ್ಯ ದರ್ಪಣ ನಮ್ಮ ಜೀವನದ ದರ್ಪಣವಾಗುವ ಕಾಲ ಬೇಗ ಬರಲಿ.

---

೧. ಕನ್ನಡ ಸಾಹಿತ್ಯದಲ್ಲಿ ಅರುಣೋದಯ–ರಾ. ಯ. ಧಾರವಾಡಕರ

ಉಪನ್ಯಾಸ ಗ್ರಂಥಮಾಲೆಯ
ಇತ್ತೀಚಿನ ಪ್ರಕಟಣೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

---

೧. ಹಳ್ಳಿಗಳಲ್ಲಿ ಗೃಹ ನಿರ್ಮಾಣ —ಎಂ. ಎಸ್. ಹುಲ್ಲೋಳಿ

೨. ಚಿದಾನಂದಾವಧೂತರು —ಆಯ್. ಆಯ್. ಕಳಕಣ್ಣವರ

೩. ಮೂಳೆ ಮುರಿದಾಗ ಮಾಡಬೇಕಾದ ಸುಲಭ ಚಿಕಿತ್ಸೆಗಳು —ಎ. ಆರ್. ರಾಮಚಂದ್ರ

೪. ಉಪ್ಪು, ಕ್ಷಾರ, ಭೂಮಿ ಮತ್ತು ಅವುಗಳ ಸುಧಾರಣೆ —ವಿಜಯಕುಮಾರ ಗಿಡ್ನವರ

೫. ಪ್ಲಾಸ್ಟಿಕ್ ಸರ್ಜರಿ-(ಸುರೂಪಕ ಶಸ್ತ್ರ ಶಾಸ್ತ್ರ) —ವಾಯ್. ಎಸ್. ಇರಕಲ್

೬. ಕಲಬುರಗಿ ಜಿಲ್ಲೆಯ ಶಿಲಾಶಾಸನಗಳು —ವಿ. ಶಿವಾನಂದ

೭. ತುಂಗಭದ್ರಾ ನೀರಾವರಿ ಬೆಳೆಗಳು —ವಿಜಯಕುಮಾರ ಗಿಡ್ನವರ

೮. ದ್ರಾವಿಡ ಜನಾಂಗ —ಸಂಗಮೇಶ ಡಿ. ಸವದತ್ತಿಮಠ

೯. ವರಲಕ್ಷ್ಮಿ ಹೈಬ್ರಿಡ್ ಹತ್ತಿ —ವಿಜಯಕುಮಾರ ಗಿಡ್ನವರ

೧೦. ಜೋಳದ ಕೀಟ ಪಿಡುಗುಗಳು —ಕೆ. ಎ. ಕುಲಕರ್ಣಿ

ಪ್ರಸಂಗವಿಸ್ತರಣ — ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ- ೫೮೦ ೦೦೩